ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬಿಗ್ ಬಾಸ್ ಸೀಸನ್ 13 ತಂಡದ ಜೊತೆಗೆ ಕಿಚ್ಚ ಸುದೀಪ್ ಸ್ಪೆಷಲ್ ಬರ್ತ್ ಡೇ

06 ಸೆಪ್ಟೆಂಬರ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -175 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಕರಗಿದ ಹಿಮ ನದಿ ಮರುಗಿದ ಮನ » 2



ಅಗೌರವದ ಸಂಸ್ಕೃತಿಯತ್ತ ಸಾಗುತ್ತಿರುವ ಜೆನ್ ಜೀ » 3



ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರ ಸೇವೆಗೆ ಬೆಲೆ ಕಟ್ಟಲಾಗದು » 4

## ದುರಸ್ತು ಅರ್ಜಿ ವಿಲೇಗೆ 3 ತಿಂಗಳ ಗಡುವು

### ಪ್ರಜಾಸೇವಾ ಆಂದೋಲನ: ಜನಸಾಮಾನ್ಯರ ಅಹವಾಲು ಆಲಿಸಿದ ಉಸ್ತುವಾರಿ ಸಚಿವ ಶಿವಲಿಂಗೇಗೌಡ

• ಪ್ರಜೋದಯ ವರದಿ

**ಹಾಸನ:** ರೈತರು ಹಲವು ವರ್ಷಗಳಿಂದ ಜಮೀನು ದುರಸ್ತಿಗಾಗಿ ಅಲೆಯುತ್ತಿರುವುದನ್ನು ತಪ್ಪಿಸಲು ಕಂದಾಯ ಇಲಾಖೆ ಅಧಿಕಾರಿಗಳು ಮಾನವೀಯತೆಯಿಂದ ಸ್ಪಂದಿಸಿ, ದುರಸ್ತಿಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ಮೂರು ತಿಂಗಳಲ್ಲಿ ಕಾರ್ಯಗತಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಗಡುವು ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶನಿವಾರ ನಡೆದ ಪ್ರಜಾಸೇವಾ ಆಂದೋಲನ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಭೆಯಲ್ಲಿ ಸ್ವೀಕಾರವಾದ ಬಹುತೇಕ ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿವೆ. ಹೀಗಾಗಿ ವಿಎ, ಆರ್ಐ, ತಹಶೀಲ್ದಾರ್, ಉಪವಿಭಾಗಾಧಿಕಾರಿ, ಎಡಿಎಲ್ಆರ್, ಡಿಡಿಎಲ್ಆರ್ ಕುಳಿತು ದುರಸ್ತಿ ಆಗದಿರಲು ಕಾರಣ ಏನು ಎಂಬುದನ್ನು ಅರಿತು ಒಬ್ಬರಿಗೊಬ್ಬರು ಸ್ಪಂದಿಸಿ ಸಂಪೂರ್ಣ ಮಾಹಿತಿ ತಿಳಿದುಕೊಂಡು ಎಲ್ಲಾ ಅರ್ಜಿಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



#### ತಹಶೀಲ್ದಾರ್ ಸರಿಯಾಗಿ ಕೆಲ್ಸ ಮಾಡ್ತಿಲ್ಲ

ಹಾಸನ ತಹಶೀಲ್ದಾರ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಗೊತ್ತಿದೆ. ಜನರನ್ನು ಕಚೇರಿಗೆ ಅಲೆಸುವುದು ಸರಿಯಲ್ಲ. ಹಾಸನ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರದೇಶ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವುದರಿಂದ ಉಳಿದ ನಾಲ್ಕು ಹೋಬಳಿಯನ್ನು ಸರಿಯಾಗಿ ನೋಡಿಕೊಳ್ಳಲು ಆಗುವುದಿಲ್ಲವೇ. ಅವರ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ಮಾಡಿಕೊಡಲು ನಿಮಗೇನು ಕಷ್ಟ. ಸ್ಥಳಕ್ಕೆ ತೆರಳಿ ಪರಿಶೀಲಿಸಿ, ಪೋಡಿ ದುರಸ್ತಿ ಮಾಡಿಕೊಡಲು ಏನು ಸಮಸ್ಯೆ ಎಂದು ಪ್ರಶ್ನಿಸಿದರು.

ರೈತರು, ಸಾರ್ವಜನಿಕರ ಸಂಕಷ್ಟಗಳನ್ನು ನಿವಾರಿಸುವ ನಿಟ್ಟಿನಲ್ಲಿ ದೂರುಗಳನ್ನು ಆಲಿಸಿ ಪರಿಹಾರ ಕಲ್ಪಿಸಲು ಸರ್ಕಾರ ಪ್ರಜಾ ಸೇವಾ ಇಲಾಖೆಯನ್ನು ಜಾರಿಗೆ ತಂದಿದೆ. ಈ ಸಭೆಯಲ್ಲಿ ಸ್ವೀಕರಿಸಲಾದ ಅರ್ಜಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳು 15 ದಿನಗಳಲ್ಲಿ ಪರಿಹಾರ ಒದಗಿಸಬೇಕು. ಕಾನೂನು ನೆಪ ಹೇಳಿಕೊಂಡು, ಹಿಂಬರಹ ನೀಡಿ ಸುಮ್ಮನಾಗದೆ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.

**ಕ್ರಿಯಾ ಯೋಜನೆ ತಯಾರಿಸಿ:**

ಮಹಾನಗರ ಪಾಲಿಕೆಗೆ ಸುತ್ತಮುತ್ತಲಿನ ಹಳ್ಳಿಗಳು ಸೇರ್ಪಡೆ ಆಗಿರುವುದರಿಂದ ಸರ್ಕಾರದಿಂದ 185 ಕೋಟಿ ರೂ. ಮಂಜೂರು ಮಾಡಿಸಲಾಗಿದೆ. ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಿಯಾ ಯೋಜನೆ ತಯಾರಿಸುವಾಗ ಈಗ ಬಂದಿರುವ ಅರ್ಜಿಗಳನ್ನು ಪರಿಗಣಿಸಿ ಸೇರಿಸುವಂತೆ ತಿಳಿಸಿದ ಅವರು, ಎ-ಖಾತೆ, ಬಿ-ಖಾತೆ ಮಾಡಿಕೊಡಲು ಎದುರಾಗಿರುವ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಕ್ರಮ ಕೊಳ್ಳುವಂತೆ ತಿಳಿಸಿದರು.

**ನಿಂತುಹೋದ ಪಿಂಚಣಿ, ವಿಎಗಳಿಗೆ ಕ್ಲಾಸ್:**

ವೃದ್ಧರಿಗೆ ಅನುಕೂಲವಾಗಲಿ ಎಂದು ಸರ್ಕಾರ ವೃದ್ಧಾಪ್ಯ ವೇತನ ಜಾರಿಗೆ ಮಾಡಿದೆ. ಆ ಕಾನೂನಿನ ಮಹತ್ವವೇ ನಿಮಗೆ ಗೊತ್ತಿಲ್ಲವೆಂದು ಗ್ರಾಮ ಆಡಳಿತಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮೂರ್ನಾಲ್ಕು ವೃದ್ಧರು ತಮಗೆ ಪಿಂಚಣಿ ಹಣ ನಿಂತುಹೋಗಿದೆ ಎಂದು ಸಚಿವರ ಎದುರು ಅಳಲು ತೋಡಿಕೊಂಡರು. ಈ ವೇಳೆ ಅಸಮಾಧಾನಗೊಂಡ ಕೆ.ಎಂ.ಶಿವಲಿಂಗೇಗೌಡ ಅವರು, ವಿಎಗಳನ್ನು ತರಾಟೆಗೆ ತೆಗೆದುಕೊಂಡು, ಮನೆ ಬಾಗಿಲಿಗೆ ತೆರಳಿ ವಾರದೊಳಗೆ ಸಮಸ್ಯೆ ಸರಿಪಡಿಸುವಂತೆ ಸೂಚಿಸಿದರು.

» ನಾಲ್ಕನೇ ಪುಟದಲ್ಲಿ

#### ಸಚಿವರ ಎದುರೇ ವಿಷ ಕುಡಿದ ವ್ಯಕ್ತಿ

ಪ್ರಜಾಸೇವಾ ಆಂದೋಲನ ಸಭೆಗೆ ಆಹವಾಲು ಸಲ್ಲಿಸಲು ಬಂದಿದ್ದ ವ್ಯಕ್ತಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆಂದು ಆರೋಪಿಸಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಎದುರೇ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಡೆಯಿತು. ತಾಲೂಕಿನ ಅಟ್ಟಾವರ ಹೊಸಹಳ್ಳಿ ಗ್ರಾಮದ ಕರೀಗೌಡ (34) ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿ.

ಜಮೀನು ವಿಚಾರಕ್ಕೆ ಸಂಬಂಧಿಸಿದಂತೆ ಪಕ್ಕದ ಜಮೀನಿನವರು ಕಿರುಕುಳ ನೀಡುತ್ತಿದ್ದಾರೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಪರಿಹಾರವಾಗಿಲ್ಲ ಎಂದು ಆರೋಪಿಸಿ, ವಿಷ ಕುಡಿದರು. ಇದನ್ನು ಗಮನಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಹಾಗು ಪೊಲೀಸ್ ಸಿಬ್ಬಂದಿ ಕೂಡಲೇ ಅವರನ್ನು ಆ್ಯಂಬುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲಿಸಿದರು.

## ಕೆಐಎಡಿಬಿಯಲ್ಲಿ ಬೃಹತ್ ಹಗರಣ: ಬಿಜೆಪಿ

**ಬೆಂಗಳೂರು:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಕೆಐಎಡಿಬಿ) ಬೃಹತ್ ಹಗರಣ ನಡೆದಿದೆ ಎಂದು ಆರೋಪಿಸಿರುವ ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದೆ.

ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಬಿಜೆಪಿ, ಕೆಐಎಡಿಬಿಯಲ್ಲಿ ಮತ್ತೊಂದು ಬೃಹತ್ ಹಗರಣ ನಡೆದಿದೆ. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರು ಯಾವುದೇ ಹರಾಜಿಲ್ಲದೆ 7.80 ಎಕರೆ ಸಿಎ ನಿವೇಶನವನ್ನು ಕಾನೂನು ಬಾಹಿರವಾಗಿ ಮಂಜೂರು ಮಾಡಿಕೊಟ್ಟಿದ್ದಾರೆಂದು ದೂರಿದೆ.

ಕಳೆದ 5 ವರ್ಷಗಳಿಂದ 71 ಎಸ್‌ಸಿ/ಎಸ್‌ಟಿ ಉದ್ಯಮಿಗಳ ಅರ್ಜಿಗಳನ್ನು ಮೂಲೆಗುಂಪು ಮಾಡಿ, ಎಂ. ಮಂಜುನಾಥ್ ಎಂಬುವವರಿಗೆ ಹಂತ ಹಂತವಾಗಿ 17 ಎಕರೆ (ಸುಮಾರು 200 ಕೋ.ರೂ. ಮೌಲ್ಯದ) ಜಮೀನು ಪರಭಾರೆ ಮಾಡಲಾಗಿದೆ. ಭ್ರಷ್ಟಾಚಾರ ಕಂಡರೆ ಫೋನ್ ಮಾಡಿ ಎನ್ನುವ ಡಿ.ಕೆ. ಶಿವಕುಮಾರ್ ಅವರೇ, ಈ ಬೃಹತ್ ಹಗರಣದ ಬಗ್ಗೆ ಜನ ದೂರು ನೀಡಲು ಯಾವ ಸಂಖ್ಯೆಗೆ ಕರೆ ಮಾಡಬೇಕೆಂದು ಪ್ರಶ್ನಿಸಲಾಗಿದೆ.

## ಒಂದು ವರ್ಷದಲ್ಲಿ 1,468 ಕೋ.ರೂ. ಸೈಬರ್ ವಂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಸೈಬರ್ ವಂಚಕರ ಜಾಲ ಸಕ್ರಿಯವಾಗಿದ್ದು, ಒಂದೇ ವರ್ಷದಲ್ಲಿ 1,468 ಕೋ. ರೂ. ವಂಚನೆ ನಡೆದಿದೆ.

ಬ್ಯಾಂಕ್ ಹೆಸರಿನಲ್ಲಿ, ನಕಲಿ ಒಟಿಪಿ, ಸೈಬರ್ ಪೊಲೀಸ್, ಗಿಫ್ಟ್ ಕೂಪನ್ ಹೀಗೆ ವಿವಿಧ ಸ್ವರೂಪಗಳಲ್ಲಿ ವಂಚನೆ ನಡೆಯುತ್ತಿದೆ. ಖದೀಮರು ಫೋನ್ ಕರೆ ಮಾಡಿ ಜನರನ್ನು ನಂಬಿಸಿ ಲಕ್ಷಾಂತರ ಹಣ ದೋಚುತ್ತಿದ್ದಾರೆ. ಫೇಸ್ ಬುಕ್, ಟ್ವಿಟ್ಟರ್ ಸೇರಿ ವಿವಿಧ ಸಾಮಾಜಿಕ ಜಾಲತಾಣಗಳ ಮೂಲಕವೂ ವಂಚನೆ ನಡೆಯುತ್ತಿದೆ.

ಸೈಬರ್ ವಂಚನೆಯ ವಿರುದ್ಧ ಕರ್ನಾಟಕ ಸೈಬರ್ ಪೊಲೀಸ್ ಘಟಕ ಕಾರ್ಯಾಚರಣೆ ನಡೆಸುತ್ತಿದೆ. ಆಧುನಿಕ ತಂತ್ರಜ್ಞಾನಗಳನ್ನು ಬಳಕೆ ಮಾಡಿ ಕಿಡಿಗೇಡಿಗಳನ್ನು ಪತ್ತೆ ಹಚ್ಚಲಾಗುತ್ತಿದೆ. 2026 ರಲ್ಲಿ 372 ಆರೋಪಿಗಳನ್ನು ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಪೊಲೀಸ್ ಇಲಾಖೆ ಮಾಹಿತಿ ನೀಡಿದೆ.

### ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಟೀಕೆ

## ಬಿಜೆಪಿ ರಾಜಕೀಯ ದೊಂಬರಾಟ

• ಪ್ರಜೋದಯ ವರದಿ

**ಹಾಸನ:** ಮಾಜಿ ಸಚಿವ ನಾಗೇಂದ್ರ ಅವರ ರಾಜೀನಾಮೆ ವಿಚಾರ ಮುಂದಿಟ್ಟುಕೊಂಡು ಬಿಜೆಪಿ ನಡೆಸುತ್ತಿರುವ ಪಾದಯಾತ್ರೆ, ರಾಜಕೀಯ ಲಾಭಕ್ಕಾಗಿ ನಡೆಸುತ್ತಿರುವ ದೊಂಬರಾಟ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಆರೋಪಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದ ವತಿಯಿಂದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಬರ ಪರಿಸ್ಥಿತಿಯ ವಾಸ್ತವಿಕ ವರದಿ ಪಡೆಯಲಾಗುತ್ತಿದೆ. ಈ ಕುರಿತು ವಿಧಾನಸಭೆಯಲ್ಲಿ ಚರ್ಚಿಸಿ, ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ಒದಗಿಸುವ ಮಾರ್ಗೋಪಾಯಗಳ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಆದರೆ, ಬಿಜೆಪಿ ರಾಜಕೀಯ ದೊಂಬರಾಟ ನಡೆಸುತ್ತಿದ್ದು, ಯಾವುದೇ ವಿಷಯದ ಕುರಿತು ಸಮರ್ಪಕ ಚರ್ಚೆಗೆ ಅವಕಾಶ ನೀಡಲಿಲ್ಲ ಎಂದು ದೂರಿದರು.



ಯಾರ ಮೇಲಾದರೂ ಆರೋಪ ಬಂದ ತಕ್ಷಣ ಅವರನ್ನು ಅಪರಾಧಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ಆರೋಪ ಸಾಬೀತಾದ ಬಳಿಕ ನ್ಯಾಯಾಂಗ ಮತ್ತು ಸಂವಿಧಾನದ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ರಾಜಕೀಯ ಪ್ರತಿಷ್ಠೆಗಾಗಿ ಬಿಜೆಪಿ ವಿಧಾನಸಭೆಯ ಕಲಾಪವನ್ನು ಹಾಳು ಮಾಡಿದೆ. ಹತ್ತು ದಿನಗಳ ಕಾಲ ರಾಜ್ಯದಲ್ಲಿನ ಬರ ಪರಿಸ್ಥಿತಿ ಕುರಿತು ಚರ್ಚೆ ನಡೆಸದೆ, ನಾಗೇಂದ್ರ ಅವರ ವಿಚಾರವನ್ನು ಮುಂದಿಟ್ಟುಕೊಂಡು ಕ್ಷುಲ್ಲಕ ರಾಜಕಾರಣ ಮಾಡಲಾಗಿದೆ ಎಂದು ಅವರು ಟೀಕಿಸಿದರು.

ಹೊಲಗಳಿಗೆ ತೆರಳಿ ಕೈಯಲ್ಲಿ ತೆನೆ ಹಿಡಿದು ಪ್ರದರ್ಶಿಸುವುದರಿಂದ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಬರದಿಂದ ಹಾನಿಗೊಳಗಾದ ಬೆಳೆಗಳಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಂತಹ ರಾಜಕೀಯ ನಾಟಕವನ್ನು ರಾಜ್ಯದ ಜನರು ನಂಬುವುದಿಲ್ಲ. ಬರ ಪರಿಸ್ಥಿತಿ ಕುರಿತು ವಿಧಾನಸಭೆಯಲ್ಲಿ ಇನ್ನೂ ಮೂರು ದಿನಗಳ ಕಾಲ ಸಮಗ್ರ ಚರ್ಚೆ ನಡೆಸಬೇಕು. ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

**ಅಲ್ಲೋಲ-ಕಲ್ಲೋಲ ಹೇಳಿಕೆಗೆ ವ್ಯಂಗ್ಯ:**

ಇದೇ ವೇಳೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ತಾವು ಬಿಡುಗಡೆ ಮಾಡುವ ಸುದ್ದಿಯಿಂದ ದೇಶದಲ್ಲಿ ಅಲ್ಲೋಲ-ಕಲ್ಲೋಲ ಸೃಷ್ಟಿಯಾಗಲಿದೆ ಎಂದು ನೀಡಿರುವ ಹೇಳಿಕೆಗೆ ಶಿವಲಿಂಗೇಗೌಡ ಅವರು ವ್ಯಂಗ್ಯ ವಾಡಿದರು.

## ಶೆಡ್‌ನಲ್ಲಿ ಅಂಬೇಡ್ಕರ್ ವಸತಿ ಶಾಲೆ: 172 ಮಕ್ಕಳ ವಾಸ್ತವ್ಯ

• ಪ್ರಜೋದಯ ವರದಿ

**ಹಾಸನ:** ಬಡ ಹಾಗು ಹಿಂದುಳಿದ ವರ್ಗದ ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸುರಕ್ಷಿತ ವಸತಿ ಕಲ್ಪಿಸಬೇಕಾದ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಯೇ ಮಕ್ಕಳ ಪಾಲಿಗೆ ನರಕಸದೃಶವಾಗಿದೆ.

ತಾಲ್ಲೂಕಿನ ಶಾಂತಿಗ್ರಾಮದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ 172 ಮಕ್ಕಳು ಕಳೆದ ಐದು ವರ್ಷಗಳಿಂದ ದನದ ಕೊಟ್ಟಿಗೆಯಂತಿರುವ ಕಟ್ಟಡದಲ್ಲಿ ವಾಸಿಸುತ್ತಿದ್ದಾರೆ. 6ನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳ ಪೈಕಿ 92 ಬಾಲಕರು ಹಾಗು 80 ಬಾಲಕಿಯರಿದ್ದಾರೆ.

ಒಂದೇ ಸ್ಥಳದಲ್ಲಿ ಊಟ ಮಾಡುವುದು, ಅಲ್ಲಿಯೇ ಮಲಗುವುದು ಹಾಗು ಪಾಠ ಕೇಳಬೇಕಾದ ದುರವಸ್ಥೆ ನಿರ್ಮಾಣವಾಗಿದೆ. ಜಾಗದ ಕೊರತೆಯಿಂದಾಗಿ ಆರನೇ ತರಗತಿ ಸೇರಿ ಹಲವು ವಿದ್ಯಾರ್ಥಿಗಳು ನೆಲದ ಮೇಲೆಯೇ ಕುಳಿತು ಪಾಠ ಕೇಳುವಂತಾಗಿದೆ. ಕಟ್ಟಡದಲ್ಲಿ ಸಮರ್ಪಕ ಗಾಳಿ ಮತ್ತು ಬೆಳಕಿನ ವ್ಯವಸ್ಥೆಯೂ ಇಲ್ಲ.

92 ಬಾಲಕರಿಗೆ ಕೇವಲ 5 ಶೌಚಾಲಯಗಳಿವೆ. 80 ಬಾಲಕಿಯರಿಗೂ ಸಮರ್ಪಕ ಶೌಚಾಲಯ ಸೇರಿ ಅಗತ್ಯ ಸೌಲಭ್ಯಗಳ ಕೊರತೆ ಎದುರಾಗಿದೆ.

▪ 5 ವರ್ಷಗಳಿಂದ ಮೂಲಸೌಕರ್ಯವಿಲ್ಲದೆ ವಿದ್ಯಾರ್ಥಿಗಳ ಬದುಕು ದುಸ್ಥಿತಿ
▪ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ



**ಕಟ್ಟಡ ನಿರ್ಮಾಣವಾಗುವವರೆಗೆ ಇದೇ ಗತಿ:**

ಹೊಸ ಕಟ್ಟಡ ನಿರ್ಮಾಣವಾಗುತ್ತಿದೆ ಎಂಬ ಕಾರಣಕ್ಕೆ ಮಕ್ಕಳ ಮೂಲಭೂತ ಹಕ್ಕುಗಳನ್ನು ನಿರ್ಲಕ್ಷಿಸುವುದು ಎಷ್ಟು ಸಮಂಜಸ ಎಂಬ ಪ್ರಶ್ನೆ ಇದೀಗ ಎದುರಾಗಿದೆ. ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಸಮಯ ಬೇಕಾದರೆ, ಅಷ್ಟರವರೆಗೆ ಮಕ್ಕಳಿಗೆ ಸುರಕ್ಷಿತ ಹಾಗೂ ಆರೋಗ್ಯಕರ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಹೊಣೆಗಾರಿಕೆ ಇಲಾಖೆಯ ಮೇಲಿದೆ.

ವಸತಿ ಶಾಲೆ ಎಂದರೆ ಕೇವಲ ನಾಲ್ಕು ಗೋಡೆಗಳೊಳಗೆ ಮಕ್ಕಳನ್ನು ಇರಿಸುವ ವ್ಯವಸ್ಥೆಯಲ್ಲ. ಸುರಕ್ಷಿತ ವಾತಾವರಣ, ಸ್ವಚ್ಛತೆ, ಆರೋಗ್ಯ, ಪೌಷ್ಟಿಕ ಆಹಾರ, ಶೌಚಾಲಯ ಹಾಗು ಅಧ್ಯಯನಕ್ಕೆ ಸೂಕ್ತ ವಾತಾವರಣವೂ ಅದರ ಅವಿಭಾಜ್ಯ ಭಾಗ. ಆದರೆ, ಶಾಂತಿಗ್ರಾಮದ ವಸತಿ ಶಾಲೆಯಲ್ಲಿ ಈ ಸೌಲಭ್ಯಗಳ ಕೊರತೆಯಾಗಿರುವುದು ಇಲಾಖೆಯ ಕಾರ್ಯವೈಖರಿ ಬಗ್ಗೆ ಪ್ರಶ್ನೆ ಮೂಡಿಸಿದೆ.

**ಅಧಿಕಾರಿಗಳ ವಿರುದ್ಧ ಆಕ್ರೋಶ:**

ಬಡ ಕುಟುಂಬಗಳ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗು ವಸತಿ ಕಲ್ಪಿಸುವ ಉದ್ದೇಶದಿಂದ ಆರಂಭಿಸಿರುವ ವಸತಿ ಶಾಲೆಯಲ್ಲಿ ಐದು ವರ್ಷಗಳಿಂದ ಇಂತಹ ಪರಿಸ್ಥಿತಿ ಮುಂದುವರಿದಿದ್ದರೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಕ್ಕಳ ಆರೋಗ್ಯ ಹಾಗೂ ಸುರಕ್ಷತೆಯೊಂದಿಗೆ ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೆ, ಕೂಡಲೇ ಅವರನ್ನು ಸುರಕ್ಷಿತ ಹಾಗೂ ಅಗತ್ಯ ಮೂಲಸೌಕರ್ಯ ಕಟ್ಟಡಕ್ಕೆ ಸ್ಥಳಾಂತರಿಸಬೇಕು. ಅಲ್ಲದೆ, ಮಕ್ಕಳಿಗೆ ಎದುರಾಗಿರುವ ಸಮಸ್ಯೆಗಳ ಕುರಿತು ಸಂಬಂಧಿಸಿದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

#### ತಿಂಗಳಿಗೆ 1.08 ಲಕ್ಷ ಬಾಡಿಗೆ

ಮಕ್ಕಳ ವಾಸ್ತವ್ಯಕ್ಕಾಗಿ ದನದ ಶೆಡ್‌ನಂತಿರುವ ಕಟ್ಟಡಕ್ಕೆ ತಿಂಗಳಿಗೆ 1.08 ಲಕ್ಷ ಬಾಡಿಗೆ ಪಾವತಿಸಲಾಗುತ್ತಿದೆ. ಕಳೆದ ಐದು ವರ್ಷಗಳಿಂದ ಇದೇ ಪರಿಸ್ಥಿತಿ ಮುಂದುವರಿದಿದೆ ಎನ್ನಲಾಗಿದೆ. ಶಾಲೆಗೆ ಶಾಶ್ವತ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಪರ್ಯಾಯವಾಗಿ ಬೇರೆಡೆ ಸೂಕ್ತ ಜಾಗ ಸಿಗದ ಕಾರಣ ಅನಿವಾರ್ಯವಾಗಿ ಇದೇ ಕಟ್ಟಡದಲ್ಲಿ ಮಕ್ಕಳನ್ನು ಇರಿಸಬೇಕಾಗಿದೆ ಎಂದು ಶಾಲೆಯ ಪ್ರಾಂಶುಪಾಲರು ಹಾಗು ಸಿಬ್ಬಂದಿ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

## ಮಾಧ್ಯಮ ಕ್ಷೇತ್ರದಲ್ಲಿ ನೆಲೆಯೂರಲು ಬರವಣಿಗೆ ಮುಖ್ಯ

### ಸ್ಟಡಿ ವಿತ್ ಸೊಸೈಟಿ ತಿಂಗಳ ಕಾರ್ಯಕ್ರಮದಲ್ಲಿ ಡಾ. ನಿರಂಜನ ವಾನಳ್ಳಿ ಸಲಹೆ

• ಪ್ರಜೋದಯ ವರದಿ

**ಹಾಸನ:** ಪ್ರಸ್ತುತ ದಿನಗಳಲ್ಲಿ ಪತ್ರಿಕೋದ್ಯಮ ವಿಷಯ ಕಲಿಸುವುದು ಸವಾಲಿನ ಕೆಲಸ, ಭಾಷೆ ಗೊತ್ತಿಲ್ಲದವರಿಗೆ ಪತ್ರಿಕೆಯ ವ್ಯಾಕರಣ ಹೇಳಿಕೊಡುವುದು ಉಪನ್ಯಾಸಕರನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದೆ. ಆದ್ದರಿಂದ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ಬಯಸುವವರು ಅಧ್ಯಯನ ಹಾಗು ಬರವಣಿಗೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕೆಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವಿಶ್ರಾಂತ ಕುಪಲತಿ ಡಾ. ನಿರಂಜನ ವಾನಳ್ಳಿ ಅವರು ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿ ವತಿಯಿಂದ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸ್ಟಡೀ ವಿತ್ ಸೊಸೈಟಿಯ ಮಾಸಿಕ ಕಾರ್ಯಕ್ರಮದಲ್ಲಿ ಡಿಜಿಟಲ್ ಯುಗದಲ್ಲಿ ಮಾಧ್ಯಮ ನೈತಿಕತೆ ಕುರಿತು ಉಪನ್ಯಾಸ ನೀಡಿದರು.

ಜರ್ನಲಿಸಂ ಎಂದರೆ ಕೇವಲ ಪತ್ರಿಕೆ ಅಥವಾ ದೃಶ್ಯ ಮಾಧ್ಯಮ ಮಾತ್ರವಲ್ಲ. ರೆಡಿಯೋ, ಮೊಬೈಲ್ ಸಹ ಜರ್ನಲಿಸಂ ವ್ಯಾಪ್ತಿಗೆ ಬರುತ್ತದೆ. ಆಧುನಿಕತೆ ಬೆಳೆದಂತೆ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಪತ್ರಿಕಾರಂಗದಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ನಮಗೆ ಬಾಹ್ಯ ಬೆಂಬಲ ನೆರವಾಗಬಹುದು. ಆದರೆ ವೃತ್ತಿಯಲ್ಲಿ ಯಶಸ್ವಿಯಾಗಿ ಮುಂದುವರಿಯಬೇಕೆಂದರೆ ನಮ್ಮದೇಯಾದ ಶ್ರಮ, ಅಧ್ಯಯನ ಬೇಕಾಗುತ್ತದೆ. ಇಲ್ಲವಾದರೆ ಕೆಲಸದಲ್ಲಿ ಮುಂದುವರಿಯುವುದು ಕಷ್ಟ. ಆದ್ದರಿಂದ ನಿರಂತರ ಅಧ್ಯಯನ ಬೇಕೆಂದರು.

**ಮಾಧ್ಯಮಕ್ಕಷ್ಟೇ ನೈತಿಕತೆ ಹೇಗೆ:**

ಈಗ ಎಲ್ಲಾ ಕ್ಷೇತ್ರಗಳಲ್ಲೂ ನೈತಿಕತೆಯ ವಿಚಾರ ಮುನ್ನಲೆಗೆ ಬಂದಿದೆ. ಸಮಾಜದ ಯಾವ ಅಂಗವು ನೈತಿಕತೆ ಉಳಿಸಿಕೊಂಡಿಲ್ಲ. ಆದರೆ ಮಾಧ್ಯಮದಲ್ಲಿ ನೈತಿಕತೆ ಅಧಪತನಕ್ಕೆ ಇಳಿದಿದೆ ಎಂದು ವ್ಯಾಖ್ಯಾನಿಸುವುದು ಎಷ್ಟರ ಮಟ್ಟಿಗೆ ಸರಿ. ಉಳಿದ ಅಂಗಗಳು ಕೊಳೆತು ನಾರುತ್ತಿರುವಾಗ ಮಾಧ್ಯಮ ಕ್ಷೇತ್ರ ಮಾತ್ರ ಪರಿಶುದ್ಧವಾಗಿರಬೇಕೆಂದು ಬಯಸುವುದು ಹೇಗೆ. ವೃತ್ತಿಯಲ್ಲಿ ನೈತಿಕತೆ ಉಳಿಸಿಕೊಳ್ಳಬೇಕೆಂದರೆ ಸಂಸ್ಥೆಗಳು ಉತ್ತಮ ಸಂಬಳ ನೀಡಬೇಕು. ನಮ್ಮಲ್ಲಿ ಅದು ಆಗುತ್ತಿದೆಯೇ ಎಂದು ಪ್ರಶ್ನಿಸಿದರು.

ಡಿಜಿಟಲ್ ಮಾಧ್ಯಮವನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಂಡರೆ ಅಭ್ಯಂತರವಿಲ್ಲ. ಆದರೆ ಯಾರದೋ ಮರ್ಯಾದೆ ತೆಗೆಯಲು, ತೇಜೋವಧೆ ಮಾಡಲು ಬಳಸಿಕೊಳ್ಳಬಾರದು. ಏಕೆಂದರೆ ಇದು ಎಷ್ಟು ಪರಿಣಾಮಕಾರಿಯೋ ಅಷ್ಟೇ ಭಯಾನಕವೂ ಆಗಬಹುದು. ಯಾರದೋ ವಿರುದ್ಧ ಸುದ್ದಿ ಪ್ರಕಟಿಸಿದರೆ ಅವರ ಅಭಿಪ್ರಾಯವನ್ನೂ ಹಾಕಬೇಕು. ಅವರ ಹೇಳಿಕೆ ಪಡೆಯದೆ ಇರುವುದು ಪರಿಪೂರ್ಣ ಸುದ್ದಿ ಆಗುವುದಿಲ್ಲ. ಸುದ್ದಿಯ ಜಾಗ ಎಂದೂ ಮಾರಾಟವಾಗಬಾರದು. ಸುದ್ದಿ ಪ್ರಕಟ ಮಾಡಲು ದುಡ್ಡು ಕೇಳೋದು ಮಾಧ್ಯಮ ಸಂಹಿತೆ ಅಲ್ಲ, ಇಲ್ಲಿ ಒಳ್ಳೆಯದು, ಕೆಟ್ಟದ್ದು ನಿರ್ಧರಿಸಲು

» ನಾಲ್ಕನೇ ಪುಟದಲ್ಲಿ



> "ಪತ್ರಿಕೋದ್ಯಮ ದುಡ್ಡು ಬಿತ್ತಿ, ದುಡ್ಡು ಬೆಳೆಯುವ ಕ್ಷೇತ್ರವಾಗಿದೆ. ವಿವಿಧ ಕಾರಣಗಳಿಂದ ಪತ್ರಿಕೋದ್ಯಮ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಇಂದು ಸಾಂಪ್ರದಾಯಿಕ ಮಾಧ್ಯಮವನ್ನು ಸೋಲಿಸುವ ರೀತಿ ಸೋಷಿಯಲ್ ಮೀಡಿಯಾ ಬೆಳೆದಿದ್ದು, ಪತ್ರಿಕಾ ಮಾಧ್ಯಮ ಸಹ ಸೋಷಿಯಲ್ ಮಿಡಿಯಾವನ್ನೇ ಅವಲಂಬಿಸಿದೆ.
> -ಡಾ. ನಿರಂಜನ ವಾನಳ್ಳಿ, ಮಾಧ್ಯಮ ತಜ್ಞ

## ಶಾಸಕ ಸುರೇಶ್ ಏಳಿಗೆ ಸಹಿಸದೆ ನಿರಾಧಾರ ಆರೋಪ

• ಪ್ರಜೋದಯ ವರದಿ

**ಹಾಸನ:** ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಅವರ ಏಳಿಗೆ ಸಹಿಸದೆ ಮಾಜಿ ಸಚಿವ ಬಿ.ಶಿವರಾಮ್ ಬೆಂಬಲಿಗರು ವೃಥಾ ಆರೋಪ ಮಾಡುತ್ತಿದ್ದಾರೆಂದು ವಕೀಲ ಅಶೋಕ್ ಕುಡುಕುಂದಿ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಬಿ.ಶಿವರಾಮ್ ಅವರು ಬೇಲೂರು ಕ್ಷೇತ್ರದಲ್ಲಿ ರಾಜಕೀಯ ನೆಲೆ ಕಂಡುಕೊಳ್ಳಲು ವಿಫಲ ಪ್ರಯತ್ನ ಮಾಡುತ್ತಿದ್ದಾರೆ. ರಾಜಕೀಯ ಲಾಭಕ್ಕೆ ಸುರೇಶ್ ಅವರ ವಿರುದ್ಧ ಆಧಾರ ರಹಿತ ಆರೋಪ ಮಾಡುವುದು ಸರಿಯಲ್ಲವೆಂದರು.

ಬೇಲೂರಿನಲ್ಲಿ ರಸ್ತೆ ಅಭಿವೃದ್ಧಿಯಾಗಿಲ್ಲ, ಅನುದಾನ ಬಳಕೆಯಾಗಿಲ್ಲ ಎಂಬ ಆರೋಪ ಸರಿಯಲ್ಲ. ಅನುದಾನ ಬಿಡುಗಡೆ ಮಾಡುವುದು ಸರ್ಕಾರದ ಜವಾಬ್ದಾರಿ, ಅನುದಾನ ಕೊರತೆಯಿಂದ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಆದರೆ ಕೇವಲ ಬೇಲೂರು ಕ್ಷೇತ್ರದಲ್ಲೇ ಸಮಸ್ಯೆಯಾಗಿದೆ ಎಂಬಂತೆ ಬಿಂಬಿಸುವುದು ಸರಿಯಲ್ಲ ಎಂದರು.



ಅಧಿಕಾರಿಗಳ ಮೇಲೆ ಶಾಸಕರು ದರ್ಪ ತೋರುತ್ತಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಜನಪ್ರತಿನಿಧಿಯಾಗಿ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಅಧಿಕಾರಿಗಳೊಂದಿಗೆ ಮಾತನಾಡುವುದು ತಪ್ಪೇನಲ್ಲ. ಅಧಿಕಾರಿಗಳ ಮೂಲಕ ಸಾರ್ವಜನಿಕರ ಕೆಲಸಗಳನ್ನು ಮಾಡಿಸುವುದು ಶಾಸಕರ ಕರ್ತವ್ಯ ಎಂದರು.

ಸುರೇಶ್ ಅವರು ರಿಯಲ್ ಎಸ್ಟೇಟ್ ದಂಧೆ ಹಾಗು ನಿವೇಶನ ಕುರಿತಾಗಿ ಮಾಡಿರುವ ಆರೋಪಗಳಿಗೂ ದಾಖಲೆಗಳಿದ್ದರೆ ಬಹಿರಂಗಪಡಿಸಲಿ. ಆಧಾರ ರಹಿತ ಆರೋಪ ಮಾಡುವ ಮೂಲಕ ಶಾಸಕರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಪ್ರಯತ್ನ ಮಾಡಬಾರದೆಂದರು.

ಸುರೇಶ್ ಅವರು 2000ರಿಂದಲೇ ಸಕ್ರಿಯ ರಾಜಕಾರಣದಲ್ಲಿದ್ದು, ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿಗಳು ಹಾಗು ಸಾರ್ವಜನಿಕರಿಗೆ ನೆರವು ನೀಡುತ್ತಾ ಬಂದಿದ್ದಾರೆ. ಶಾಲಾ-ಕಾಲೇಜುಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು ಸೇರಿ ಹಲವು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆಂದು ತಿಳಿಸಿದರು.

ದೀರ್ಘಕಾಲ ರಾಜಕೀಯ ಮಾಡಿದ್ದರೂ ಯಾರನ್ನೂ ಬೆಳೆಸದ ಮಾಜಿ ಸಚಿವರು, ಜನರಿಂದ ಆಯ್ಕೆಯಾದ ಶಾಸಕರನ್ನು ಅವಮಾನಿಸುವ ಅಥವಾ ತೇಜೋವಧೆ ಮಾಡುವ ರೀತಿ ಹೇಳಿಕೆ ನೀಡುವುದು ಸರಿಯಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಮಹಲಿಂಗಪ್ಪ, ಶಂಭೇಗೌಡ ಇದ್ದರು.

## 7 ಕೆ.ಜಿ. ಹಸಿ ಗಾಂಜಾ ಸೊಪ್ಪು ವಶ

**ಆಲೂರು:** ಮಾರಾಟದ ಉದ್ದೇಶದಿಂದ ಮನೆ ಹಿಂಭಾಗದ ಹಿತ್ತಲಲ್ಲಿ ಬೆಳೆದಿದ್ದ 1.05 ಲಕ್ಷ ರೂ. ಮೌಲ್ಯದ 7 ಕೆ.ಜಿ. ಹಸಿ ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿರುವ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕುಂದೂರು ಹೋಬಳಿ ನೆಲ್ಲಿಗೆರೆ ಗ್ರಾಮದ ಎಸ್.ಎಸ್. ಪ್ರದೀಪ್ ಆರೋಪಿ. ಖಚಿತ ಮಾಹಿತಿ ಮೇರೆಗೆ ಪೊಲೀಸ್ ಸಿಬ್ಬಂದಿ ದಾಳಿ ನಡೆಸುತ್ತಿದ್ದಂತೆ ಪ್ರದೀಪ್ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದ. ಆತನನ್ನು ಬೆನ್ನಟ್ಟಿ ಹಿಡಿದಿದ್ದಾರೆ.

## ಹಳೇ ದ್ವೇಷದಿಂದ ವ್ಯಕ್ತಿಯ ಕೊಲೆ

• ಪ್ರಜೋದಯ ವರದಿ

**ಅರಸೀಕೆರೆ:** ಹಳೇ ದ್ವೇಷದಿಂದ ದುಷ್ಕರ್ಮಿಗಳು ವ್ಯಕ್ತಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಬಸವನಹಟ್ಟಿ ಸಮೀಪದ ಬಸವೇಶ್ವರ ನಗರದ ಜಮೀನಿನಲ್ಲಿ ನಡೆದಿದೆ.

ಬಸವನಹಟ್ಟಿಯ ಮೋಹನ್ (36) ಮೃತರು. ಕೃಷಿಕರಾಗಿದ್ದ ಅವರು ಶುಕ್ರವಾರ ರಾತ್ರಿ ಶುಂಠಿ ಬೆಳೆಗೆ ನೀರು ಹಾಯಿಸಲೆಂದು ಜಮೀನಿಗೆ ತೆರಳಿದ್ದರು. ಅವರು ಅಲ್ಲಿ ಇರುವುದನ್ನು ಮೊದಲೇ ಖಚಿತಪಡಿಸಿಕೊಂಡಿದ್ದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆಗೈದಿದ್ದಾರೆ.

ನಿತ್ಯ ಜಮೀನಿನಲ್ಲಿ ಭೇಟಿಯಾಗುತ್ತಿದ್ದ ಕಾಳೇನಹಳ್ಳಿ ಹಟ್ಟಿ ಗ್ರಾಮದ ಮಂಜಣ್ಣ ಎಂಬುವವರು ಮೃತದೇಹ ಕಂಡು ಗ್ರಾಮದ ಗುರುರಾಜು ಅವರಿಗೆ ವಿಷಯ ತಿಳಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಮೃತರ ಪತ್ನಿ ಜಯಲಕ್ಷ್ಮಿ ಅವರು ಸ್ಥಳಕ್ಕೆ ಭೇಟಿ ನೀಡಿದಾಗ ಮೋಹನ್ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡಿದೆ.

ಮಾರಕ ಆಯುಧಗಳಿಂದ ಹೊಡೆದು ಕೊಲೆ ಮಾಡಿರುವ ದುಷ್ಕರ್ಮಿಗಳನ್ನು ಪತ್ತೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಜ್ಯೋತಿಲಕ್ಷ್ಮಿ ಆಗ್ರಹಿಸಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕನ್ನಡದ ಬೇರುಗಳೊಂದಿಗೆ ಇಂಗ್ಲೀಷ್ ಜ್ಞಾನ ಬೆಳೆಸಿ

• ಪ್ರಜೋದಯ ವರದಿ

**ಹಾಸನ:** ಜಾಗತಿಕ ಸ್ಪರ್ಧೆಯ ಯುಗದಲ್ಲಿ ಮಕ್ಕಳಿಗೆ ಇಂಗ್ಲಿಷ್ ಭಾಷಾ ಜ್ಞಾನ ಅಗತ್ಯವಿದ್ದರೂ, ಅದಕ್ಕಾಗಿ ಮಾತೃಭಾಷೆ ಕನ್ನಡದ ಮೇಲಿನ ಪ್ರೀತಿ, ಅಭಿಮಾನ ಹಾಗು ಗೌರವವನ್ನು ಕಳೆದುಕೊಳ್ಳಬಾರದು. ಕನ್ನಡದ ಬೇರುಗಳೊಂದಿಗೆ ಇಂಗ್ಲೀಷ್ ಜ್ಞಾನವನ್ನು ಬೆಳೆಸಿಕೊಂಡಾಗ ಮಕ್ಕಳ ಭವಿಷ್ಯ ಮತ್ತಷ್ಟು ಸದೃಢವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗು ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಹಾಗು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇಂಗ್ಲೀಷ್ ಮಾಧ್ಯಮದ ಶಿಕ್ಷಣವು ಆರ್ಥಿಕವಾಗಿ ಸಬಲ ಕುಟುಂಬಗಳ ಮಕ್ಕಳಿಗೆ ಮಾತ್ರ ಸೀಮಿತವಾಗಬಾರದು. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ಹಾಗು ಗ್ರಾಮೀಣ ಪ್ರದೇಶದ ಮಕ್ಕಳಿಗೂ ಖಾಸಗಿ ಶಾಲೆಗಳ ಮಕ್ಕಳಿಗೆ ಸರಿಸಾಟಿಯಾದ ಆಧುನಿಕ ಹಾಗು ಗುಣಮಟ್ಟದ ಶಿಕ್ಷಣ ದೊರೆಯಬೇಕು. ಈ ನಿಟ್ಟಿನಲ್ಲಿ ಸರ್ಕಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಕಾಲಕ್ಕೆ ತಕ್ಕ ಬದಲಾವಣೆಗಳನ್ನು ತರಬೇಕಿದೆ ಎಂದು ಹೇಳಿದರು.

### ಗ್ರಾಮೀಣ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಲಿ | ಸಚಿವ ಕೆ.ಎಂ. ಶಿವಲಿಂಗೇಗೌಡ



**ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಬೇಕು:**

ಕೆಪಿಎಸ್ ಶಾಲೆಗಳ ಮೂಲಕ ಸರ್ಕಾರಿ ಶಿಕ್ಷಣ ವ್ಯವಸ್ಥೆಯಲ್ಲಿಯೂ ಇಂಗ್ಲೀಷ್ ಮಾಧ್ಯಮದ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಗ್ರಾಮೀಣ ಮಕ್ಕಳಲ್ಲಿಯೂ ಆತ್ಮವಿಶ್ವಾಸ ಹಾಗೂ ಜಾಗತಿಕ ಸ್ಪರ್ಧಾ ಸಾಮರ್ಥ್ಯ ಬೆಳೆಸುವ ಅಗತ್ಯವಿದೆ. ದೇಶ ಹಾಗು ರಾಜ್ಯದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು. ಶಿಕ್ಷಕರು ಕೇವಲ ಪಠ್ಯಪುಸ್ತಕದ ಜ್ಞಾನ ನೀಡುವವರಲ್ಲ. ವಿದ್ಯಾರ್ಥಿಗಳ ಚಿಂತನೆ, ವ್ಯಕ್ತಿತ್ವ, ನಡವಳಿಕೆ ಹಾಗೂ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳಾಗಿದ್ದಾರೆ. ಆದ್ದರಿಂದ ಶಿಕ್ಷಕರ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿ, ಶಿಕ್ಷಣ ಕ್ಷೇತ್ರದ ಮೂಲಕ ಸಮಾಜದ ಪ್ರಗತಿಗೆ ವೇಗ ನೀಡಬೇಕು ಎಂದು ತಿಳಿಸಿದರು.

**ಶಿಕ್ಷಕರ ಪರಿಶ್ರಮಕ್ಕೆ ಮೆಚ್ಚುಗೆ:** ಸಂಸದ ಶ್ರೇಯಸ್ ಪಾಟೀಲ್ ಅವರು ಮಾತನಾಡಿ, ತಂದೆ-ತಾಯಿಯ ನಂತರ ಮಕ್ಕಳ ಜೀವನದಲ್ಲಿ ಶಿಕ್ಷಕರ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಯೊಬ್ಬನ ಸಾಧನೆಯ ಹಿಂದೆ ಶಿಕ್ಷಕರ ಮಾರ್ಗದರ್ಶನ ಹಾಗು ಪರಿಶ್ರಮ ಅಡಗಿರುತ್ತದೆ. ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಾಸನ ಜಿಲ್ಲೆ ರಾಜ್ಯದಲ್ಲಿ ನಾಲ್ಕನೇ ಸ್ಥಾನ ಪಡೆಯಲು ಶಿಕ್ಷಕರ ಶ್ರಮ ಪ್ರಮುಖ ಕಾರಣವಾಗಿದೆ. ಬೋಧನೆಯ ಜೊತೆಗೆ ವಿವಿಧ ಇಲಾಖೆಗಳ ಜವಾಬ್ದಾರಿಗಳನ್ನೂ ನಿರ್ವಹಿಸುತ್ತಿರುವ ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕಾರ್ಯವನ್ನು ಸಮರ್ಥವಾಗಿ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಮಾತನಾಡಿ, ಶಿಕ್ಷಕರ ಪ್ರಾಮಾಣಿಕ ಸೇವೆ ಹಾಗು ಮಾರ್ಗದರ್ಶನದಿಂದ ವಿದ್ಯಾರ್ಥಿಗಳು ಉನ್ನತ ಸಾಧನೆ ಮಾಡಲು ಸಾಧ್ಯ. ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ ನಾಲ್ಕನೇ ಸ್ಥಾನ ಪಡೆದಿರುವ ಹಾಸನ ಜಿಲ್ಲೆ ಮುಂದಿನ ವರ್ಷ ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆಯುವ ಗುರಿ ಹೊಂದಬೇಕು ಎಂದು ಕರೆ ನೀಡಿದರು.

ವಿಶ್ರಾಂತ ಪ್ರಾಂಶುಪಾಲ ಡಾ.ಆರ್. ಓಂಬಳೇಶ್ ಘಟ್ಟಿ ವಿಶೇಷ ಉಪನ್ಯಾಸ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶುಭಂಶುಕ್ಲಾ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ.ಆರ್.ರಂಜಿತ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಇನ್ನಿತರರಿದ್ದರು.

#### ಗುರು ಎಂದರೆ ವ್ಯಕ್ತಿಯಲ್ಲ, ಶಕ್ತಿ

ಶಿಕ್ಷಕರು ಸಮಾಜದಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ಪ್ರಜ್ಞಾವಂತರನ್ನಾಗಿ ಮಾಡಿ ಉತ್ತಮ ಸಮಾಜ ನಿರ್ಮಾಣಕ್ಕೆ ಅವರ ಕೊಡುಗೆ ಅಪಾರವಾಗಿದೆ. ಗುರು ಎಂದರೆ ವ್ಯಕ್ತಿಯಲ್ಲ, ಅದೊಂದು ಶಕ್ತಿ, ಅಜ್ಞಾನದ ಕತ್ತಲೆಯನ್ನು ದೂಡಿ, ಸುಜ್ಞಾನದ ಬೆಳಕನ್ನು ನೀಡುವ ಶಕ್ತಿ ಶಿಕ್ಷಕನಿಗಿ ಮಾತ್ರ, ಸಮಾಜದಲ್ಲಿ ಅತ್ಯಂತ ಎತ್ತರದ ಗೌರವದ ಸ್ಥಾನ ಶಿಕ್ಷಕನಿಗೆ ದೊರಕುತ್ತದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

**ನೇಪಾಳದಲ್ಲಿ ಆಗಿರುವ ದುರಂತಕ್ಕಾಗಿ ಸಂತಾಪಗಳನ್ನು ಸೂಚಿಸುತ್ತಲೇ, ಅಲ್ಲಿ ಸಂಭವಿಸಿದ ನಷ್ಟದ ಪ್ರಮಾಣವನ್ನು ಗಮನಿಸಿದರೆ, (ಇನ್ನೂ ಪೂರ್ತಿ ವಿವರ ಬಂದಿಲ್ಲವಾದರೂ), ಇಂತಹ ಒಂದು ಭೀಕರ ಅನಾಹುತವು, ನಿರೀಕ್ಷಿತ ಪ್ರಮಾಣದಲ್ಲಿ ಜಗತ್ತಿನ ಗಮನವನ್ನು ಸೆಳೆದಿಲ್ಲವೆಂದೇ ಹೇಳಬೇಕು. ದುರಂತಗಳು ಪ್ರಚಾರವನ್ನು ಬಯಸುವುದಿಲ್ಲ, ಆದರೆ, ದುರಂತದ ಪ್ರಮಾಣವು ಗೊತ್ತಾದರೆ, ಬೇರೆ ದೇಶಗಳಿಂದ ಕೊನೆಯ ಪಕ್ಷ ಸಹಾಯವನ್ನಾದರೂ ಪಡೆಯಲು ಸಾಧ್ಯವಾಗಬಲ್ಲದು.**

# ಕರಗಿದ ಹಿಮನದಿ, ಮರುಗಿದ ಮನ

ತನ್ನದಲ್ಲದ ತಪ್ಪಿನಿಂದಾಗಿ, ನೇಪಾಳ ದೇಶವು ಕಳೆದ ಎರಡು ವಾರಗಳಿಂದ ಅನುಭವಿಸುತ್ತಿರುವ ಭೀಕರ ಪ್ರಾಕೃತಿಕ ವಿಕೋಪದ ವ್ಯಾಪ್ತಿ, ನಷ್ಟದ ಪ್ರಮಾಣ ಇನ್ನೂ ಪೂರ್ತಿಯಾಗಿ ಬೆಳಕಿಗೆ ಬಂದಿಲ್ಲ! ಬೆಟ್ಟಗುಡ್ಡಗಳಿಂದ ಆವೃತವಾದ ಆ ದೇಶದ ಜನರು, ಜಗತ್ತಿನ ಮುಂದುವರಿದ ದೇಶದ ಜನರಿಗೆ ಹೋಲಿಸಿದರೆ, ಅಮಾಯಕರು, ಸರಳ ಬದುಕನ್ನು ಕಟ್ಟಿಕೊಂಡವರು. ಹೊರಜಗತ್ತಿನ ಪ್ರವಾಸಿಗರು, ಪರ್ವತಾರೋಹಿಗಳು ನೇಪಾಳಕ್ಕೆ ಬರುವುದು ಜಾಸ್ತಿಯಾಗುತ್ತಿದ್ದರೂ, ನೇಪಾಳದ ಜನರು ಹೊರ ಜಗತ್ತನ್ನು ಕಂಡವರಲ್ಲ ಎಂದೇ ಹೇಳಬಹುದು. ಹೆಚ್ಚೆಂದರೆ, ಭಾರತ ಮೊದಲಾದ ದೇಶಗಳಲ್ಲಿ ಕೆಲಸವನ್ನು ಅರಸುತ್ತಾ ಬಂದಿರುವವರೇ ಅಧಿಕ.

ನೇಪಾಳದಲ್ಲಿ ಆಗಿರುವ ದುರಂತಕ್ಕಾಗಿ ಸಂತಾಪಗಳನ್ನು ಸೂಚಿಸುತ್ತಲೇ, ಅಲ್ಲಿ ಸಂಭವಿಸಿದ ನಷ್ಟದ ಪ್ರಮಾಣವನ್ನು ಗಮನಿಸಿದರೆ, (ಇನ್ನೂ ಪೂರ್ತಿ ವಿವರ ಬಂದಿಲ್ಲವಾದರೂ), ಇಂತಹ ಒಂದು ಭೀಕರ ಅನಾಹುತವು, ನಿರೀಕ್ಷಿತ ಪ್ರಮಾಣದಲ್ಲಿ ಜಗತ್ತಿನ ಗಮನವನ್ನು ಸೆಳೆದಿಲ್ಲವೆಂದೇ ಹೇಳಬೇಕು. ದುರಂತಗಳು ಪ್ರಚಾರವನ್ನು ಬಯಸುವುದಿಲ್ಲ, ಆದರೆ, ದುರಂತದ ಪ್ರಮಾಣವು ಗೊತ್ತಾದರೆ, ಬೇರೆ ದೇಶಗಳಿಂದ ಕೊನೆಯ ಪಕ್ಷ ಸಹಾಯವನ್ನಾದರೂ ಪಡೆಯಲು ಸಾಧ್ಯವಾಗಬಲ್ಲದು.

ನೇಪಾಳದಲ್ಲಿ ಕಂಡುಬಂದ ನೆರೆಯಿಂದಾಗಿ, ಸತ್ತವರ ಮತ್ತು ಕಣ್ಮರೆಯಾದವರ ಸಂಖ್ಯೆ 5000 ದಾಟಿದೆ; ಕೇವಲ ಒಂದು ದಿನದಲ್ಲಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಇದು. ದುರಂತಗಳನ್ನು ಹೋಲಿಸಬಾರದು ಎನ್ನುವರು; ಆದರೂ ಒಂದು ಉದಾಹರಣೆಯನ್ನು ನೋಡುವುದಾದರೆ, ಕಳೆದ ಹತ್ತು ವರ್ಷಗಳಲ್ಲಿ ಅಮೆರಿಕ (ಯುಎಸ್) ದೇಶದಲ್ಲಿ ನೆರೆಯಿಂದ ಪ್ರಾಣ ಕಳೆದುಕೊಂಡವರ ಸಂಖ್ಯೆ ಸುಮಾರು 1300. ನೇಪಾಳದ ಪಕ್ಕದ ದೇಶವಾದ ಚೀನಾದಂತಹ ಅಧಿಕ ಜನಸಂಖ್ಯೆಯ ದೇಶದಲ್ಲಿ ಕಳೆದ ಒಂದು ವರ್ಷದಲ್ಲಿ ನೆರೆಯಿಂದಾದ ಜೀವಹಾನಿಯು ಸುಮಾರು 770. ಆದರೆ ನೇಪಾಳದಲ್ಲಿ ಒಂದೇ ದಿನ ಸುಮಾರು 5000ಕ್ಕೂ ಅಧಿಕ ಜನರು ನೆರೆಯಲ್ಲಿ ಕೊಚ್ಚಿಹೋದರು!

ಮಾತ್ರವಲ್ಲ, ಆ ಭೀಕರ ಪ್ರವಾಹದ ನಂತರವೂ, ಮತ್ತಷ್ಟು ಪ್ರವಾಹಗಳು ಅಲ್ಲಿ ಒಂದರ ಹಿಂದೆ ಒಂದರಂತೆ ಹರಿದುಬರುತ್ತಿದ್ದು ಇನ್ನಷ್ಟು ಜನರು ಅದರಲ್ಲಿ ಸಿಲುಕಿಹಾಕಿಕೊಳ್ಳುವ ಸಾಧ್ಯತೆ ಇದೆ ಎಂದು ವರದಿಯಾಗುತ್ತಿದೆ.

ತ್ರಿಶೂಲಿ ನದಿಯಲ್ಲಿ ಒಮ್ಮೆಗೇ ಪ್ರವಾಹ ಉಕ್ಕಿ ಬರಲು, ಚೀನಾ ದೇಶದಲ್ಲಿ ಹಿಮನೀರ್ಗಲ್ಲ ನದಿಯು ಕರಗಿ, ಜಾರಿ ಬಂದದ್ದು ಮತ್ತು ಅದರಿಂದಾಗಿ, ತಾತ್ಕಾಲಿಕ ಸರೋವರವು ಪರ್ವತಗಳ ನಡುವೆ ನಿರ್ಮಾಣ ಗೊಂಡು, ಆ ಸರೋವರವು ಒಮ್ಮೆಗೇ ಒಡೆದು ಅಪಾರ ಪ್ರಮಾಣದ ನೀರು ಬರಿದು ಬಂದದ್ದು ಕಾರಣ ಎಂದು ಈಗಿನ ವರದಿಗಳು ಹೇಳುತ್ತಿವೆ. ದುರ್ದೈವದ ಸಂಗತಿ ಎಂದರೆ, ಇತಿಹಾಸದಲ್ಲಿ ಇಷ್ಟೊಂದು ಪ್ರಮಾಣದ ನೀರು, ಇಷ್ಟು ಎತ್ತರದ ಪ್ರವಾಹವು ತ್ರಿಶೂಲಿ ನದಿಯಲ್ಲಿ ಬಂದ ವರದಿಗಳಿಲ್ಲ!

ಕಳೆದ ಹಲವು ನೂರು ವರ್ಷಗಳಲ್ಲಿ ಇಂತಹ ಅನಿರೀಕ್ಷಿತ ಪ್ರವಾಹವು ಅಲ್ಲಿ ಬಂದಿಲ್ಲ, ಆದ್ದರಿಂದಲೇ, ತ್ರಿಶೂಲಿ ಊರಿನಲ್ಲಿ ನದಿಯುದ್ದಕ್ಕೂ ಜನವಸತಿ ಇತ್ತು, ಮನೆಗಳಿದ್ದವು; ನದಿಯ ಪಕ್ಕದಲ್ಲಿ ಈ ಹಿಂದಿನ ನೆರೆಯ ಪ್ರಮಾಣವನ್ನು ಕಂಡು, ಅಷ್ಟು ಜಾಗ ಬಿಟ್ಟು, ಜನರು ಮನೆಗಳನ್ನು ಕಟ್ಟಿಕೊಂಡಿದ್ದರು. ನೇಪಾಳಕ್ಕೆ ನೆರೆ ಹೊಸದೇನಲ್ಲ; ಪ್ರತಿವರ್ಷದ ನೆರೆಗಳು ಆ ಬದುಕನ್ನು ಹೆಚ್ಚಿನ ಹಾನಿಗೆ ಒಳಪಡಿಸಿರಲಿಲ್ಲ. ಹಾಗಾದರೆ, ಎಂದೂ ಹರಿದುಬರದಂತಹ ಪ್ರವಾಹವು ತ್ರಿಶೂಲಿ ನದಿಯಲ್ಲಿ ಹರಿದು ಬರಲು ಕಾರಣವೇನು?

ಇದೇ ಹಿನ್ನೆಲೆಯಲ್ಲಿ, ನೇಪಾಳ ದೇಶವು ಈಗ ಒಂದು ತಗಾದೆಯನ್ನು ಜಗತ್ತಿನ ದೇಶಗಳ ಮುಂದೆ ಇಟ್ಟಿದೆ. 5000 ಕ್ಕೂ ಅಧಿಕ ಜನರನ್ನು ಕೊಚ್ಚಿಕೊಂಡು ಹೋಗಿದ್ದಲ್ಲದೇ, 500 ಕೋಟಿ ಡಾಲರುಗಳಿಗಿಂತಲೂ ಅಧಿಕ ನಷ್ಟವನ್ನುಂಟುಮಾಡಿದ ಈ ಪ್ರವಾಹದಿಂದಾದ ಹಾನಿಯನ್ನು, ಅಮೆರಿಕ, ಚೀನಾ, ಭಾರತ ಮೊದಲಾದ ದೇಶಗಳು ತುಂಬಿಕೊಡಬೇಕು ಎಂಬ ತಗಾದೆ ಅದು! ಇಲ್ಲಿ, ಅದರ ನೆರೆಯ ದೇಶ ಚೀನಾ ಹೆಸರು ಬಂದಿದ್ದರ ಕುರಿತು ಸಮಜಾಯಿಷಿ ನೀಡಬಹುದು. ಆದರೆ, ಭಾರತ ಮತ್ತು ಅಮೆರಿಕದ ಹೆಸರನ್ನು ನೇಪಾಳ ಎತ್ತಿದ್ದಾದರೂ ಏಕೆ?

ಇದಕ್ಕೆ ಒಂದು ಉತ್ತರ ಎಂದರೆ, ಹವಾಮಾನ ಬದಲಾವಣೆ, ಅದಕ್ಕೆ ಕಾರಣಗಳು ಮತ್ತು ಪರಿಸರ ರಕ್ಷಣೆ. ಕಳೆದ ಹಲವು ದಶಕಗಳಿಂದ, ಅಮೆರಿಕವೂ ಸೇರಿದಂತೆ ಜಗತ್ತಿನ ಅಧಿಕ ಜನಸಂಖ್ಯೆ ಹೊಂದಿದ ದೇಶಗಳು ಹೆಚ್ಚಿನ ಕಾರ್ಬನ್ ಫೂಟ್‌ಪ್ರಿಂಟ್ಸ್‌ನ್ನು ಮೂಡಿಸಿವೆ, ಅದರಿಂದಾಗಿ, ಭೂಮಿಯ ತಾಪಮಾನವು ನಿಧಾನವಾಗಿ ಹೆಚ್ಚಳಗೊಂಡಿದೆ. ಆದರೆ ನೇಪಾಳದಿಂದಾಗುತ್ತಿರುವ ಪರಿಸರ ಹಾನಿ ಬಹಳ ಕಡಿಮೆ ಪ್ರಮಾಣದ್ದು.

ಆದರೆ, ದೂರದ ಹಲವು ದೇಶಗಳು ಪೆಟ್ರೋಲ್ ಸುಟ್ಟದ್ದರಿಂದ, ಅಪಾರ ಪ್ರಮಾಣದ ಕಾಡನ್ನು ಕಡಿದಿದ್ದರ ಪರಿಣಾಮವಾಗಿಯೇ, ಹಿಮಾಲಯದಲ್ಲಿನ ಬಹುಎತ್ತರದ ಪರ್ವತ ಕಮರಿಗಳಲ್ಲಿ ಸಂಗ್ರಹಗೊಂಡಿರುವ ಹಿಮದ ಬಂಡೆಗಳು ವೇಗವಾಗಿ ಕರಗುತ್ತಿವೆ, ಕರಗಿ ಜಾರಿ ಕೆಳಗಿನ ಕಣಿವೆಗೆ ಬಂದು, ನೀರಾಗಿ ಹರಿದುಬರುತ್ತಿವೆ, ಅಂತಹ ಹಿಮನದಿಗಳು ಕರಗಿದಾಗ ಅಲ್ಲಲ್ಲಿ ಕೃತಕ ಸರೋವರಗಳುಂಟಾಗಿ, ಅವು ಒಡೆದಾಗ, ತ್ರಿಶೂಲಿ ನದಿಯಲ್ಲಿ ಬಂದಂತಹ ಪ್ರವಾಹ ಬರುತ್ತವೆ, ಆದ್ದರಿಂದ, ತನ್ನ ದೇಶದಲ್ಲಿ ನಡೆದ ಭೀಕರ ದುರಂತಕ್ಕೆ, ಪ್ರವಾಹಕ್ಕೆ ಮುಂದುವರಿದ ದೇಶಗಳೇ ಕಾರಣ ಎಂಬುದು ನೇಪಾಳದ ತಗಾದೆ.

ಹಿಮಾಲಯದ ಮಡಿಲಲ್ಲಿರುವ ಪುಟ್ಟ ದೇಶ ನೇಪಾಳದ ಈ ತಗಾದೆಯು, ತರ್ಕಸಹಿತವಾದುದು. ಏಕೆಂದರೆ, ಕಳೆದ ಹಲವು ದಶಕಗಳಿಂದ, ಜಗತ್ತಿನ ವಿವಿಧ ಭಾಗದ ವಿಜ್ಞಾನಿಗಳು, ಈ ರೀತಿಯ ಅನಿರೀಕ್ಷಿತ ಪ್ರವಾಹ ಬರುವ ಸಾಧ್ಯತೆಯನ್ನು ಊಹಿಸಿದ್ದರು. ಊಹೆ ಅನ್ನುವುದಕ್ಕಿಂತ, ಖಚಿತವಾಗಿ ಇಂತಹದ್ದೇ ನಡೆಯುತ್ತದೆ ಎಂದು ಪುರಾವೆ ಸಹಿತ ಹೇಳಿದ್ದರು. ಭೂಮಿಯ ತಾಪಮಾನವು ಒಂದು ಡಿಗ್ರಿ ಜಾಸ್ತಿಯಾದರೆ ಎಷ್ಟು ಹಿಮ ಕರಗುತ್ತದೆ, ಎರಡು ಡಿಗ್ರಿ ಜಾಸ್ತಿಯಾದರೆ ಎಷ್ಟು ಹಿಮ ಕರಗುತ್ತದೆ ಎಂಬುದನ್ನು ವಿವರವಾಗಿ ಲೆಕ್ಕ ಹಾಕಿ ಹೇಳಿದ್ದರು.

ವಿಜ್ಞಾನಿಗಳ ಈ ಮುನ್ಸೂಚನೆಗೆ ಹಲವು ದಶಕಗಳ ಹವಾಮಾನದ ದಾಖಲೆಗಳ ಆಧಾರವಿದೆ, ವೈಜ್ಞಾನಿಕ ಚಿಂತನೆಯ ತಳಹದಿಯೂ ಇದೆ. ಹಿಮಾಲಯದಲ್ಲಿನ ಹಿಮ, ಜಗತ್ತಿನ ಇತರ ಪ್ರದೇಶಗಳಲ್ಲಿರುವ ಪರ್ವತದಲ್ಲಿನ ಹಿಮ, ಧ್ರುವ ಪ್ರದೇಶದ ಹಿಮ ಎಲ್ಲವೂ, ಭೂತಾಪಮಾನ ಏರಿಕೆಗೆ ಪಕ್ಕಾಗುವಂತಹವುಗಳೇ. ಇಲ್ಲೆಲ್ಲಾ ಕಳೆದ ಸಾವಿರಾರು ವರ್ಷಗಳಿಂದ ಸಂಗ್ರಹಗೊಂಡ ಹಿಂದ ಬಂಡೆಗಳು ಮೌನವಾಗಿ ಕುಳಿತಿವೆ, ಅಂದರೆ ಕರಗಿಲ್ಲ.

ಒಮ್ಮೆ ಅವುಗಳ ತಳಪಾಯ ಅಥವಾ ಒಂದು ಭಾಗವು ನಿಧಾನವಾಗಿ ಕರಗಿ, ಸಡಿಲಗೊಂಡಿತು ಎಂದರೆ, ಕರಗಿದ ನೀರಿನ ಜತೆಯಲ್ಲೇ, ಬೃಹದಾಕಾರದ ಹಿಮದ ಬಂಡೆಗಳು ಕುಸಿದು ಬರುತ್ತವೆ. ವರ್ಷಕ್ಕೆ ಕೆಲವೇ ಇಂಚು ಅಥವಾ ಕೆಲವೇ ಅಡಿಗಳಷ್ಟು ಮಾತ್ರ ಕೆಳಗೆ ಸರಿಯುತ್ತಿದ್ದ ಹಿಮನೀರ್ಗಲ್ಲ ನದಿಗಳು (ಗ್ಲೇಷಿಯರ್), ಒಮ್ಮೆಗೇ ತಮ್ಮ ಕುಸಿತಕ್ಕೆ ವೇಗೋತ್ಕರ್ಷ ಪಡೆದು, ಸರಸರನೆ ಹರಿದು ಕೆಳಭಾಗಕ್ಕೆ ಬರುತ್ತವೆ. ಕಳೆದ ಆಗಸ್ಟ್ 26ರಂದು ತ್ರಿಶೂಲಿ ನದಿಯಲ್ಲಿ ಹತ್ತಾರು ಅಡಿ ಎತ್ತರದ ನೀರಿನ ಪ್ರವಾಹ ಒಮ್ಮೆಗೇ ಹರಿದು ಬರಲು, ಇಂತಹದ್ದೇ ಒಂದು ಬೃಹತ್ ಹಿಮ ಕುಸಿತ ಕಾರಣ.

ಈ ಭೀಕರ ದುರಂತದಲ್ಲಿ ನೇಪಾಳದ ಹಲವು ಪಟ್ಟಣಗಳು, ಹಳ್ಳಿಗಳು ಕೊಚ್ಚಿಹೋಗಿವೆ; ಕೆಲವು ಹಳ್ಳಿಗಳಂತೂ ಪೂರ್ತಿ ನೆಲಸಮವಾಗಿವೆ. ತ್ರಿಶೂಲಿ ಮೊದಲಾದ ಪಟ್ಟಣಗಳ ಅರ್ಧಕ್ಕರ್ಧ ಭಾಗವು ನೀರಿಗೆ ಆಹುತಿಯಾಗಿದೆ. ಅಲ್ಲಿದ್ದ ಜನರು ಭೀಕರ ಪ್ರಾಕೃತಿಕ ಪ್ರಕೋಪಕ್ಕೆ ಬಲಿಯಾಗಿದ್ದಾರೆ. ಅಧಿಕೃತ ಸಂಖ್ಯೆಯ ಜತೆಯಲ್ಲೇ, ಕೆಸರಿನಲ್ಲಿ ಅವೆಷ್ಟೋ ಜನರು ಹೂತುಹೋಗಿದ್ದಾರೆ ಎಂಬ ವರದಿಗಳೂ ಬರುತ್ತಿದ್ದು, ಅವರನ್ನು ಕೆಸರಿನಿಂದ ಹೊರತೆಗೆಯುವ ಕೆಲಸಕ್ಕೂ ವಿಘ್ನಗಳಾಗುತ್ತಿವೆ. ಸ್ಥಳೀಯ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು, ನೇಪಾಳ ಸರಕಾರವು ಪರಿಹಾರ ಕಾರ್ಯ ನಡೆಸುತ್ತಿದೆ; ಅಂತಾರಾಷ್ಟ್ರೀಯ ನೆರವನ್ನು ಪಡೆಯುವಾಗ ಎಚ್ಚರಿಕೆಯ ನಡೆಯನ್ನು ಸಹ ಇಡುತ್ತಿದೆ.






ಅಲ್ಲಿನ ಹಲವು ಸೇತುವೆಗಳು ಕೊಚ್ಚಿಹೋಗಿದ್ದು, ನದಿಯ ಒಂದು ದಡದಿಂದ ಇನ್ನೊಂದು ದಡಕ್ಕೆ ಪರಿಹಾರವನ್ನು ಒದಗಿಸುವಲ್ಲೂ ಬಹಳ ತೊಡಕುಂಟಾಗಿದೆ. ಒಂದು ದಡದಿಂದ ಇನ್ನೊಂದು ದಡಕ್ಕೆ ಜನರು ಹೋಗಲು ಸಂಪರ್ಕ ಸಾಧನವಿಲ್ಲದೇ, ಹಗ್ಗದಿಂದ ಎಳೆಯುವ ಪುಟ್ಟ ಪಂಜರದಲ್ಲಿ ಮನುಷ್ಯರನ್ನು ಮತ್ತು ಆಹಾರ ಧಾನ್ಯವನ್ನು ಸಾಗಿಸುವ ಕೆಲಸ ನಡೆದಿದೆ. ಪದೇ ಪದೇ ಪ್ರವಾಹಗಳು ಉಕ್ಕಿ ಬರುತ್ತಲೇ ಇರುವುದರಿಂದಾಗಿ, ದೋಣಿಯನ್ನು ಸಹ ಸಮರ್ಪಕವಾಗಿ ಬಳಸದೇ ಇರುವಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ನೇಪಾಳ ಇದೆ.

ಆದರೆ, ನೇಪಾಳದ ಈ ಭೀಕರ ದುರಂತವು, ಪಡೆಯಬೇಕಾದಷ್ಟು ಪ್ರಚಾರವನ್ನು (ಒಂದರ್ಥದಲ್ಲಿ ಪ್ರಚಾರ ಬೇಕಿಲ್ಲ ನಿಜ) ಮತ್ತು ಅಂತಾರಾಷ್ಟ್ರೀಯ ಮಟ್ಟದ ನೆರವನ್ನು ಪಡೆಯುತ್ತಿಲ್ಲವೆಂದೇ ನನ್ನ ಅನಿಸಿಕೆ. ನೇಪಾಳದ ಸಾವಿರಾರು ಜನರು ಕಣ್ಮರೆಯಾಗಿದ್ದರ ಜತೆಯಲ್ಲೇ, ನೂರಾರು ಪ್ರವಾಸಿಗರು ಸಹ ಆ ನೆರೆಯಲ್ಲಿ ಸಿಕ್ಕಿಹಾಕಿಕೊಂಡಿದ್ದರು. ಮಾನಸ ಸರೋವರ, ಕೈಲಾಸ ಪರ್ವತಕ್ಕೆ ಹೊರಟಿದ್ದ, ಹೋಗಿದ್ದ ಯಾತ್ರಿಕರು, ಪ್ರವಾಸಿಗರು, ನೇಪಾಳಕ್ಕೆ ಬಂದ ಇತರ ಪ್ರವಾಸಿಗರು ಸಹ ಪ್ರವಾಹಕ್ಕೆ ಸಿಲುಕಿಕೊಂಡಿದ್ದರು. ಅವರಲ್ಲಿ ಎಷ್ಟೋ ಜನರ ಮಾಹಿತಿಯು, ಇಂದಿಗೂ, ಅಂದರೆ ಸುಮಾರು ಎರಡು ವಾರಗಳಾದರೂ ದೊರಕುತ್ತಿಲ್ಲ!

ಅಂದಾಗ, ಅಲ್ಲಿನ ಇಂದಿನ ದುಸ್ಥಿತಿಯನ್ನು ಸ್ವಲ್ಪವಾದರೂ ಊಹಿಸಬಹುದು. ಅಂತಾರಾಷ್ಟ್ರೀಯ ಗಮನದ ವಿಚಾರಕ್ಕೆ ಬಂದರೆ, ಈಗ ಕಂಡುಬಂದಿರುವ ಜಾಗತಿಕ ನಿರ್ಲಕ್ಷ್ಯದಂತಹ ಸನ್ನಿವೇಶಕ್ಕೆ, ನೇಪಾಳವು ಪಾಶ್ಚಾತ್ಯ ಜಗತ್ತಿನಿಂದ ಬಹು ದೂರವಿರುವುದೂ ಒಂದು ಕಾರಣವಿರಬಹುದು. ಇಂತಹದ್ದೇ ದುರಂತಗಳು ಆಫ್ರಿಕಾದಲ್ಲೋ, ಯುರೋಪಿನಲ್ಲೋ, ಕ್ಯೂಬಾದಂತಹ ದೇಶಗಳಲ್ಲೋ ನಡದಿದ್ದರೆ, ಇದಕ್ಕೂ ಬಹುಪಾಲು ಜಾಗತಿಕ ಗಮನವನ್ನು ಸೆಳೆಯುತ್ತಿದ್ದವು. ಈ ರೀತಿ ಗಮನ ಸೆಳೆಯುವುದರಿಂದಾಗಿ, ಸೂಕ್ತ ನೆರವನ್ನು ಪಡೆಯಲು ಸಹಾಯವಾಗುತ್ತದೆ. ಆದರೆ, ನೇಪಾಳವನ್ನು ದೊಡ್ಡ ದೊಡ್ಡ ದೇಶಗಳು ಅದೇನೋ ಕಾರಣದಿಂದಾಗಿ ದೂರವಿಟ್ಟಿವೆ ಎಂಬ ಭಾವನೆ ಮೂಡುತ್ತಿರುವುದಂತೂ ನಿಜ.

ನೇಪಾಳದ ಒಂದು ಪಕ್ಕದಲ್ಲಿ ಭಾರತ, ಇನ್ನೊಂದು ಪಕ್ಕದಲ್ಲಿ ಚೀನಾ ಇರುವುದರಿಂದಾಗಿ, ಇವೆರಡೂ ದೇಶಗಳನ್ನು ನೇಪಾಳವು ವಿವಿಧ ಸಂದರ್ಭಗಳಲ್ಲಿ ನೆಚ್ಚಿಕೊಂಡಿರಬೇಕಾದ ಅನಿವಾರ್ಯತೆ ಇದೆ. ಭಾರತವು ಮೊದಲಿನಿಂದಲೂ ನೇಪಾಳಕ್ಕೆ ಹಲವು ರೀತಿಯಲ್ಲಿ ಸಹಕರಿಸುತ್ತಿದೆ; ಜತೆಗೆ, ಪುರಾತನ ಕಾಲದಿಂದಲೂ ಪರಸ್ಪರ ಬಾಂಧವ್ಯ ಹೊಂದಿರುವ ದೇಶಗಳು ಇವು. ಇಂದಿಗೂ ನೇಪಾಳದ ಹಲವರು ವೃತ್ತಿಯನ್ನು ಅರಸುತ್ತಾ ಭಾರತಕ್ಕೆ ಬರುತ್ತಿರುವುದು, ಇಂತಹ ಒಂದು ಬಾಂಧವ್ಯದ ಪ್ರತೀಕ ಎಂದೇ ಗುರುತಿಸಲು ಸಾಧ್ಯ.

ಆದರೆ, ಚೀನಾದೊಂದಿಗಿನ ನೇಪಾಳದ ಬಾಂಧವ್ಯವನ್ನು ಬೇರೆಯದೇ ರೀತಿಯಲ್ಲಿ ಗುರುತಿಸಬೇಕಾದೀತು. ನೇಪಾಳದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಚೀನಾವು ಹಲವು ಸನ್ನಿವೇಶಗಳಲ್ಲಿ ಸಹಾಯ ಮಾಡಿರುವುದು ವರದಿಯಾಗಿದೆ.

ಮುಖ್ಯವಾಗಿ, ನೇಪಾಳದಲ್ಲಿ ಅಧಿಕಾರವನ್ನು ಹಿಡಿದ ಪಕ್ಷಗಳು ಚೀನಾದೊಂದಿಗೆ ಹೆಚ್ಚಿನ ಗೆಳೆತನವನ್ನು ಬಯಸಿದಾಗ, ಇಂತಹ ನೆರವನ್ನು ಚೀನಾ ನೀಡಿದೆ. ಈ ರೀತಿ ಚೀನಾವು ಹೊರದೇಶಗಳಿಗೆ ನೆರವನ್ನು ನೀಡಿದರೆ, ಅದರ ಹಿಂದೆ ರಾಜಕೀಯ ಉದ್ದೇಶಗಳಿವೆ ಎಂಬ ವಿಶ್ಲೇಷಣೆಗಳಿದ್ದರೂ, ಹಲವು ಆಯಾಮಗಳಲ್ಲಿ ಸಾಕಷ್ಟು ಹಿಂದುಳಿದಿರುವ ನೇಪಾಳವು, ಅಗತ್ಯ ಎನಿಸುವ ನೆರವನ್ನು ಪಡೆದಾಗ ಕೊಂಕು ನುಡಿಯುವುದು ಸಮಂಜಸವಲ್ಲ.

ಆದರೆ, ಎರಡು ವಾರಗಳ ಹಿಂದೆ ತ್ರಿಶೂಲಿ ನದಿಯಲ್ಲಿ ಉಕ್ಕಿಬಂದ ಭೀಕರ ಪ್ರವಾಹದ ವಿಚಾರದಲ್ಲಿ, ಇಂತಹದ್ದೇ ನಿರ್ಲಿಪ್ತ ವಿಶ್ಲೇಷಣೆಯನ್ನು ಮಾಡುವಂತಿಲ್ಲ. ಅದಕ್ಕೇ ಇರಬೇಕು, ನೇಪಾಳವು ತನಗಾದ ನಷ್ಟವನ್ನು ಜಗತ್ತಿನ ವಿವಿಧ ದೇಶಗಳು ತುಂಬಿಕೊಡಬೇಕು ಎನ್ನುವಾಗ, ಚೀನಾದ ಹೆಸರನ್ನು ಪ್ರಧಾನವಾಗಿ ಪ್ರಸ್ತಾಪಿಸಿದ್ದು! ತ್ರಿಶೂಲಿ ನದಿಯಲ್ಲಿ ನುಗ್ಗಿಬಂದ ಮೃತ್ಯುಸ್ವರೂಪಿ ಪ್ರವಾಹದ ಮೂಲ ಚೀನಾ ದೇಶದಲ್ಲಿತ್ತು ಎಂಬ ವಿಚಾರವನ್ನೂ ಇಲ್ಲಿ ಗಮನಿಸಬೇಕು.

ಭೂತಾಪಮಾನ ಏರಿಕೆಯಿಂದಾಗಿ ಚೀನಾದಲ್ಲಿದ್ದ ಹಿಮನೀರ್ಗಲ್ಲ ನದಿ ಕುಸಿತ ಉಂಟಾಗಿರುವುದರಿಂದ, ಇದರಲ್ಲಿ ಚೀನಾ ದೇಶದ ನೇರ ಹಸ್ತಕ್ಷೇಪ ಇಲ್ಲದೇ ಇರಬಹುದು; ಆದರೆ, ಚೀನಾವು ಆ ಪ್ರದೇಶದಲ್ಲಿ ಅಪಾರ ಪ್ರಮಾಣದ ಕಾಮಗಾರಿ ಕಾರ್ಯವನ್ನು ನಿರಂತರವಾಗಿ ನಡೆಸುತ್ತಿದೆ ಎಂದಾಗ, ತನ್ನ ನೆರೆಯ ದೇಶದ ಕುರಿತ ಕಾಳಜಿಯನ್ನು ಹೊಂದಿರುವುದು ಚೀನಾದ ಕರ್ತವ್ಯವೇ ಸರಿ. ತನ್ನ ವ್ಯಾಪ್ತಿಯಲ್ಲಿರುವ ಪ್ರದೇಶದಲ್ಲಿ ಕೃತಕ ಸರೋವರ ಕರಗಿ, ನೆರೆ ನುಗ್ಗುತ್ತಿರುವ ವಿಚಾರವನ್ನು ಮುಂಚಿತವಾಗಿ ಚೀನಾವು ನೇಪಾಳಕ್ಕೆ ತಿಳಿಸಬೇಕಿತ್ತು ಎಂಬ ವಾದವೂ ಇದೆ; ಆ ಕೆಲಸವನ್ನು ಚೀನಾ ಮಾಡಿತ್ತು, ಆದರೆ ಒಂದೆರಡು ಗಂಟೆಗಳ ಅವಧಿಯಲ್ಲಿ ಸೂಕ್ತ ಎಚ್ಚರಿಕೆ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂಬ ವರದಿಗಳೂ ಬಂದಿವೆ.

ಈ ರೀತಿ ನೆರೆ ನುಗ್ಗಿ ಬರುತ್ತಿದೆ ಎಂಬ ಸುದ್ದಿ ತಿಳಿದು, ಒಂದೆರಡು ಶಾಲೆಗಳ ಮುಖ್ಯೋಪಾಧ್ಯಾಯರು, ನದಿಯ ಸನಿಹದಲ್ಲಿದ್ದ ಶಾಲಾ ಕಟ್ಟಡದಿಂದ ಮಕ್ಕಳನ್ನು ಎತ್ತರದ ಜಾಗಕ್ಕೆ ಸ್ಥಳಾಂತರಿಸಿ, ಸಾವಿರಾರು ಪ್ರಾಣಗಳನ್ನು ಉಳಿಸಿದ ವರದಿಗಳನ್ನು ಕಂಡಾಗ, ಚೀನಾದಿಂದ ಅಂತಹ ಸಂದೇಶ ಬಂದಿತ್ತು, ಆದರೆ ಪ್ರಾಯೋಗಿಕ ತೊಡಕುಗಳಿಂದಾಗಿ ಆ ನೆರೆಯ ಭೀಕರತೆಯನ್ನು ಮುಂಚಿತವಾಗಿ ಜನಸಾಮಾನ್ಯರೆಲ್ಲರಿಗೂ ತಿಳಿಸಲು ಸಾಧ್ಯವಾಗಲಿಲ್ಲ ಎಂಬುದನ್ನೂ ಗಮನಿಸಬಹುದು.

ಆದ್ದರಿಂದ, ಇಂತಹದೊಂದು ಭೀಕರ ನೆರೆಯ ಹಾನಿಯನ್ನು ಕಡಿಮೆಗೊಳಿಸಲು, ಅಕ್ಕಪಕ್ಕದ ದೇಶದ ಸಹಕಾರಕ್ಕಿಂತಲೂ, ಜಗತ್ತಿನ ಎಲ್ಲಾ ದೇಶಗಳ ಸಾಮೂಹಿಕ ಜವಾಬ್ದಾರಿಯೇ ಮುಖ್ಯ ಎಂಬುದನ್ನು ಎತ್ತಿಹೇಳಬೇಕಾಗಿದೆ. ಇದು ಈಗಿನ ತ್ರಿಶೂಲಿ ಪ್ರವಾಹಕ್ಕೂ ಅನ್ವಯ ಮತ್ತು ಅದಕ್ಕಿಂತ ಮಿಗಿಲಾಗಿ ಭವಿಷ್ಯದಲ್ಲಿ ಇಂತಹ ಪ್ರವಾಹಗಳನ್ನು ಕಡಿಮೆಗೊಳಿಸಲು ಸಹ ಅಗತ್ಯ.

ನೇಪಾಳದಲ್ಲಿ ನಡೆದ ಈ ಭೀಕರ ದುರಂತವು, ನಮ್ಮ ದೇಶವನ್ನೂ ಸೇರಿದಂತೆ, ಹಲವು ದೇಶಗಳಿಗೆ ಪಾಠವಾಗಬೇಕಿದೆ. ನಮ್ಮ ದೇಶದ ಉತ್ತರಾಂಚಲ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಅಂತಹದ್ದೇ ವಾತಾವರಣವಿದೆ, ಅದೇ ರೀತಿ ಎತ್ತರದ ಹಿಮಾಲಯಗಳಿಂದ ಹರಿದು ಬರುವ ಹಲವು ನದಿಗಳಿವೆ, ಅವುಗಳ ಉಗಮ ಸ್ಥಾನದಲ್ಲಿ ಸಾವಿರಕ್ಕೂ ಅಧಿಕ ಹಿಮ ನೀರ್ಗಲ್ಲ ನದಿಗಳಿವೆ. ಭೂತಾಪಮಾನ ಏರಿಕೆಯಾದಂತೆಲ್ಲಾ, ಅವು ವೇಗವಾಗಿ ಕರಗುತ್ತಿವೆ ಎಂದು ವಿಜ್ಞಾನಿಗಳು ಈಗಾಗಲೇ ಖಚಿತವಾಗಿ ತರ್ಕಬದ್ಧವಾಗಿ ಲೆಕ್ಕಹಾಕಿ, ತಮ್ಮ ಅಧ್ಯಯನದ ವಿವರಗಳನ್ನು ಪ್ರಕಟಿಸಿದ್ದಾರೆ.

ಅಂತಹ ಹಿಮನೀರ್ಗಲ್ಲ ನದಿಗಳು ಕರಗಿ ಆಗುವ ಪ್ರವಾಹವನ್ನು ಎದುರಿಸಲು ಸಿದ್ಧತೆ ನಡೆಸುವುದು ಒಂದೆಡೆಯಾದರೆ, ಜಾಗತಿಕವಾಗಿ ಭೂತಾಪಮಾನ ತಡೆಯಲು ಸೂಕ್ತ ಕ್ರಮವನ್ನು ಕೈಗೊಳ್ಳುವುದು ಸಹ ಅಗತ್ಯವಿದೆ. ಮೊದಲನೆಯದು ನಮ್ಮ ದೇಶದ ಜವಾಬ್ದಾರಿ, ಎರಡನೆಯದು ಜಗತ್ತಿನ ಎಲ್ಲಾ ದೇಶಗಳ ಜವಾಬ್ದಾರಿ. ಆದರೆ, ಹೆಚ್ಚು ವಿವರವಾಗಿ ಯೋಚಿಸುತ್ತಾ ಹೋದರೆ, ಇದು ಪರಿಹಾರ ದೊರಕದೇ ಇರುವಂತಹ ಪ್ರಶ್ನೆಯಾಗಿ ನಮ್ಮೆಲ್ಲರನ್ನೂ ಕಾಡಿದರೆ ಅಚ್ಚರಿಯಿಲ್ಲ!

– **ಶಶಿಧರ** ಹಾಲಾಡಿ

# ಭೂಗೋಳ ಶಾಸ್ತ್ರವು ಕೇವಲ ಪುಸ್ತಕದ ಪಾಠವಲ್ಲ ; ಪರಿಸರದ ಜೀವಂತ ವಿಜ್ಞಾನ

ಇದು ಕಾಲ್ಪನಿಕ ಬರಹವಾಗಿದೆ. ಭಾರತದ ಪಶ್ಚಿಮ ಭಾಗದಲ್ಲಿ ಸಹ್ಯಾದ್ರಿ ಬೆಟ್ಟಗಳು ಸಾಲು ಸಾಲಾಗಿ ಹಬ್ಬಿ ನಿಂತಿವೆ. ಈ ಪರ್ವತ ಶ್ರೇಣಿಗಳಲ್ಲಿ ಬಹಳಷ್ಟು ನದಿಗಳು ಜನ್ಮ ಪಡೆದು ಅಸಂಖ್ಯಾತ ಜೀವರಾಶಿಗಳ ಜೀವನಾಡಿಯಾಗಿವೆ. ಅಂತಹ ಪ್ರಮುಖ ನದಿಗಳಲ್ಲಿ ತುಂಗಾ ನದಿಯೂ ಒಂದು. ಈ ನದಿಯ ತಪ್ಪಲು ಪ್ರದೇಶದಲ್ಲಿ ಕಾನನದ ಹರಡುವಿಕೆ ಹೆಚ್ಚಾಗಿಯೇ ಇದೆ. ಬೆಟ್ಟಗಳ ಸಾಲಲ್ಲಿ ದಟ್ಟ ಅರಣ್ಯಗಳು, ಅಲ್ಲಲ್ಲಿ ಚಿಕ್ಕ ಚಿಕ್ಕ ಮೈದಾನ ಪ್ರದೇಶಗಳು. ಬೆಟ್ಟಗಳ ತಪ್ಪಲಿನಲ್ಲಿರುವ ಒಂದು ಕಾಲ್ಪನಿಕ ಊರು ಶೃಂಗಪುರ, ಅಲ್ಲೊಂದು ಕಾಲೇಜು. ಅದರ ಹೆಸರು ನನ್ನ ಕಲ್ಪನೆಯ ಅಭಿಜ್ಞಾನ ಶಾಕುಂತಲ ಪದವಿ ಪೂರ್ವ ಕಾಲೇಜು ಎಂದು. ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿ ಕೊಠಡಿಗಳು ಮಕ್ಕಳಿಂದ ತುಂಬಿವೆ. ಮಕ್ಕಳ ಬಗ್ಗೆ ಹೆಚ್ಚು ಗಮನ ಹರಿಸಿ ಪಾಠ ಹೇಳುವ ಉಪನ್ಯಾಸಕರು. ಅಂತಹ ಉಪನ್ಯಾಸಕರಲ್ಲಿ ನನ್ನ ಕಲ್ಪನೆಯ ಉಪನ್ಯಾಸಕರೊಬ್ಬರೆಂದರೆ ಶಂಕರ್ ವಲ್ಲಭಾಚಾರ್ಯರವರು. ಇವರು ಭೂಗೋಳ ಶಾಸ್ತ್ರ ವಿಷಯವನ್ನು ಹೆಚ್ಚು ಆಸಕ್ತಿಯಿಂದ ಬೋಧಿಸುತ್ತಾರೆ. ಇವರೆಂದರೆ ಮಕ್ಕಳಿಗೆ ಅಚ್ಚುಮೆಚ್ಚು. ಶಂಕರ್ ವಲ್ಲಭಾಚಾರ್ಯರು ತರಗತಿ ಕೋಣೆ ಪ್ರವೇಶಿಸಿದ ಕೂಡಲೇ ಎಲ್ಲಾ ವಿದ್ಯಾರ್ಥಿಗಳು ಎದು ನಿಂತು ಶುಭೋದಯ ಸರ್ ಎನ್ನುತ್ತಾರೆ. ಆಗ ಉಪನ್ಯಾಸಕರು ಶುಭೋದಯ ಮಕ್ಕಳೇ! ನಮ್ಮ ಸಹ್ಯಾದ್ರಿಯ ಹಸಿರು ಮತ್ತು ತುಂಗಾ ನದಿಯ ತಂಪಾದ ವಾತಾವರಣದಲ್ಲಿ ಇಂದು ನಾವು ಭೂಗೋಳ ಶಾಸ್ತ್ರದ ಮೂಲ ಪರಿಕಲ್ಪನೆಗಳ ಬಗ್ಗೆ ತಿಳಿಯೋಣ. ನಿಮ್ಮಲ್ಲಿರುವ ಆಸಕ್ತಿದಾಯಕ ಪ್ರಶ್ನೆಗಳನ್ನು ಕೇಳಿ ಎನ್ನುತ್ತಾರೆ. ಆಗ ಭೂಮಿ ಸಾರ್, ಭೂಗೋಳ ಶಾಸ್ತ್ರ ಎಂದರೆ ನಿಜವಾದ ಅರ್ಥವೇನು? ಸಾರ್ ಎಂದು ಕೇಳಿದಳು. ಅದಕ್ಕೆ ಉಪನ್ಯಾಸಕರು ಉತ್ತಮ ಪ್ರಶ್ನೆ ಭೂಮಿ. ಜಿಯೋಗ್ರಾಫಿ ಎಂಬ ಪದವು ಗ್ರೀಕ್ ಭಾಷೆಯ ಜಿಯೋ (ಭೂಮಿ) ಮತ್ತು ಗ್ರಾಫಿಯಾ (ವಿವರಣೆ) ಎಂಬ ಪದಗಳಿಂದ ಬಂದಿದೆ. ಎರಾಟೋಸ್ತನೀಸ್ ಇದನ್ನು ಮೊದಲು ಬಳಸಿದರು. ಸರಳವಾಗಿ ಹೇಳಬೇಕೆಂದರೆ, ಇದು ಭೂಮಿಯ ಮೇಲ್ಮೈ ಮತ್ತು ಅದರ ಮೇಲಿನ ಮಾನವ ಹಾಗೂ ಪ್ರಕೃತಿಯ ನಡುವಿನ ಸಂಬಂಧದ ವಿವರಣೆ ಎಂದರ್ಥ ಎಂದರು. ತಕ್ಷಣ ರಾಗಿಣಿ ಎದ್ದು ನಿಂತು ಸಾರ್, ಭೂಗೋಳ ಶಾಸ್ತ್ರದಲ್ಲಿ ಪ್ರಮುಖವಾಗಿ ಎಷ್ಟು ಶಾಖೆಗಳಿವೆ? ಎಂದಳು. ಆಗ ಉಪನ್ಯಾಸಕರು ರಾಗಿಣಿ, ಮುಖ್ಯವಾಗಿ ಎರಡು ಶಾಖೆಗಳಿವೆ. ಒಂದು ಪ್ರಾಕೃತಿಕ ಭೂಗೋಳ ಶಾಸ್ತ್ರ : ಭೂರೂಪಗಳು, ವಾಯುಗುಣ, ಜಲರಾಶಿ ಮತ್ತು ಮಣ್ಣಿನ ಕುರಿತು ತಿಳಿಸುತ್ತದೆ. ಇನ್ನೊಂದು ಮಾನವ ಭೂಗೋಳ ಶಾಸ್ತ್ರ: ಜನಸಂಖ್ಯೆ, ಸಂಸ್ಕೃತಿ, ಆರ್ಥಿಕ ಚಟುವಟಿಕೆಗಳು ಮತ್ತು ನಗರೀಕರಣದ ಕುರಿತು ಮಾಹಿತಿ ನೀಡುತ್ತದೆ ಎಂದರು. ಏನೋ ಯೋಚಿಸುತ್ತಿದ್ದ ಕಲ್ಯಾಣಿ ಸಾರ್, ನಾವು ವಾಸಿಸುವ ಈ ಸಹ್ಯಾದ್ರಿ ಪರ್ವತ ಶ್ರೇಣಿ ಮತ್ತು ತುಂಗಾ ನದಿ ಯಾವ ಶಾಖೆಗೆ ಸೇರುತ್ತವೆ? ಕೇಳಿದಾಗ, ಉಪನ್ಯಾಸಕರು ಕಲ್ಯಾಣಿ, ಇವು ಪ್ರಾಕೃತಿಕ ಭೂಗೋಳ ಶಾಸ್ತ್ರದ ಭೂಸ್ವರೂಪ ಶಾಸ್ತ್ರ ಮತ್ತು ಜಲಶಾಸ್ತ್ರ ಶಾಖೆಗಳಿಗೆ ಸೇರುತ್ತವೆ ಎಂದರು. ಕುತೂಹಲದಿಂದ ಸಿಂಧು: ಸಾರ್, ಪರಿಸರ ಮತ್ತು ಮಾನವನ ನಡುವಿನ ಸಂಬಂಧವನ್ನು ಭೂಗೋಳ ಹೇಗೆ ವಿವರಿಸುತ್ತದೆ? ಎಂದು ಕೇಳಿದಳು. ಆಗ ಉಪನ್ಯಾಸಕರು ಸಿಂಧು, ಇದನ್ನು ಎರಡು ಸಿದ್ಧಾಂತಗಳು ವಿವರಿಸುತ್ತವೆ ; ಒಂದು ಪರಿಸರ ನಿಶ್ಚಯವಾದ : ಇಲ್ಲಿ ಪ್ರಕೃತಿಯೇ ಮಾನವನ ಜೀವನಶೈಲಿಯನ್ನು ನಿರ್ಧರಿಸುತ್ತದೆ. ಮತ್ತೊಂದು ಸಾಧ್ಯತಾವಾದ: ಮಾನವನು ತನ್ನ ತಂತ್ರಜ್ಞಾನದಿಂದ ಪ್ರಕೃತಿಯಲ್ಲಿ ಬದಲಾವಣೆ ತರಬಹುದು ಎಂಬ ಅಂಶವನ್ನು ತಿಳಿಸುತ್ತದೆ.

ತರಗತಿಯ ಜಾಣ ವಿದ್ಯಾರ್ಥಿನಿ ಜ್ಞಾನ ಸಾರ್, ಭೂಗೋಳ ಶಾಸ್ತ್ರವನ್ನು ಅಭ್ಯಾಸ ಮಾಡಲು ನಾವು ಯಾವ ಮೂಲಭೂತ ಸಾಧನಗಳನ್ನು ಬಳಸುತ್ತೇವೆ? ಎಂದು ಕೇಳಿದಾಗ ಉಪನ್ಯಾಸಕರು ಜ್ಞಾನ, ನಕ್ಷೆಗಳು, ಗೋಲ, ದೂರಸಂವೇದಿ ತಂತ್ರಜ್ಞಾನ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ ಪ್ರಮುಖ ಸಾಧನಗಳನ್ನು ಬಳಸಿಕೊಂಡು ಅಭ್ಯಾಸ ಮಾಡಬೇಕಾಗುತ್ತದೆ ಎಂದರು. ಆಗ ಕಮಲ ಸಾರ್, ಈ ವಿಷಯವನ್ನು ಕಲಿಯುವುದರಿಂದ ನಮಗೆ ದಿನನಿತ್ಯದ ಜೀವನದಲ್ಲಿ ಏನು ಉಪಯೋಗ? ಎಂದು ಪ್ರಶ್ನಿಸಿದಳು. ಆಗ ಉಪನ್ಯಾಸಕರು ಕಮಲ, ಹವಾಮಾನ ಮುನ್ಸೂಚನೆ ತಿಳಿಯಲು, ಕೃಷಿ ಯೋಜನೆ ರೂಪಿಸಲು, ನೈಸರ್ಗಿಕ ವಿಕೋಪಗಳ ನಿರ್ವಹಣೆಗೆ ಮತ್ತು ನಮ್ಮ ಸುತ್ತಮುತ್ತಲಿನ ಪರಿಸರವನ್ನು ರಕ್ಷಿಸಲು ಇದು ಸಹಕಾರಿ ಎಂದು ವಿವರಿಸಿದರು. ಆಗಲೇ ಸುರಭಿಗೆ ಒಂದು ಸಂಶಯ ಸಾರ್, ಭೂಗೋಳವನ್ನು ಎಲ್ಲ ವಿಜ್ಞಾನಗಳ ತಾಯಿ ಎಂದು ಏಕೆ ಕರೆಯುತ್ತಾರೆ? ಎಂದಳು. ಆಗ ಉಪನ್ಯಾಸಕರು ಸುರಭಿ, ಏಕೆಂದರೆ ಇದು ಖಗೋಳಶಾಸ್ತ್ರ, ಭೂವಿಜ್ಞಾನ, ಸಸ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇತಿಹಾಸದಂತಹ ಅನೇಕ ವಿಷಯಗಳನ್ನು ಸಂಯೋಜಿಸಿ ಅಭ್ಯಾಸ ಮಾಡುತ್ತದೆ. ಹಾಗಾಗಿ ಇದು ಎಲ್ಲ ವಿಜ್ಞಾನಗಳ ತಾಯಿ ಎಂದು ಹೇಳಲಾಗುತ್ತದೆ ಎಂದರು. ಅತ್ಯುತ್ತಮ ಶ್ರೇಣಿಯ ವಿದ್ಯಾರ್ಥಿನಿ ಮೇಘ ಸಾರ್, ನಮ್ಮ ಶೃಂಗಪುರದಂತಹ ಮಲೆನಾಡು ಪ್ರದೇಶದಲ್ಲಿ ಭೂಗೋಳದ ಅಧ್ಯಯನ ಹೇಗೆ ಮುಖ್ಯವಾಗುತ್ತದೆ? ಎಂದು ಕೇಳಿದಾಗ ಉಪನ್ಯಾಸಕರು ಇದು ಅತ್ಯುತ್ತಮ ಪ್ರಶ್ನೆ ಮೇಘ. ಮಣ್ಣಿನ ಸವೆತ ತಡೆಯಲು, ಅಪಾರ ಮಳೆಯಿಂದಾಗುವ ಭೂಕುಸಿತ ನಿರ್ವಹಿಸಲು ಮತ್ತು ಜೀವವೈವಿಧ್ಯತೆಯನ್ನು ಕಾಪಾಡಿಕೊಳ್ಳಲು ನಮಗೆ ಭೌಗೋಳಿಕ ಜ್ಞಾನ ಅತ್ಯಗತ್ಯ ಎಂದರು. ಮುಂದುವರಿದು ಮಕ್ಕಳೇ, ಭೂಗೋಳ ಶಾಸ್ತ್ರವು ಕೇವಲ ಪುಸ್ತಕದ ಪಾಠವಲ್ಲ; ಅದು ನಾವು ವಾಸಿಸುವ ಭೂಮಿಯನ್ನು, ಪರಿಸರವನ್ನು ಅರ್ಥೈಸಿಕೊಳ್ಳುವ ಜೀವಂತ ವಿಜ್ಞಾನ. ನಮ್ಮ ಸಹ್ಯಾದ್ರಿಯ ಮಡಿಲಲ್ಲಿ ಕುಳಿತು ಇದನ್ನು ಕಲಿಯುವುದು ನಮ್ಮ ಸೌಭಾಗ್ಯ. ಪರಿಸರವನ್ನು ಪ್ರೀತಿಸಿ, ಪ್ರಕೃತಿಯನ್ನು ರಕ್ಷಿಸಿ. ಎಂದು ಜಾಗೃತಿ ಮೂಡಿಸಿದರು.

ಗುರುಗಳಿಗೆ ಮತ್ತೊಂದು ಪ್ರಶ್ನೆ ಕೇಳೋ ಸಲುವಾಗಿ ಭೂಮಿ ಎದ್ದು ನಿಂತು ಸಾರ್, ಭೂಗೋಳ ಶಾಸ್ತ್ರದಲ್ಲಿ ಸ್ಥಳ ಮತ್ತು ಸ್ಥಾನ ನಡುವೆ ಏನು ವ್ಯತ್ಯಾಸವಿದೆ? ತಿಳಿಸಿ ಕೊಡಿ ಸಾರ್ ಎಂದಳು. ಅದಕ್ಕೆ ಉಪನ್ಯಾಸಕರು ಇದು ಬಹಳ ಸೂಕ್ಷ್ಮವಾದ ಪ್ರಶ್ನೆ ಭೂಮಿ! ಸ್ಥಳ ಎಂಬುದು ಅಕ್ಷಾಂಶ ಮತ್ತು ರೇಖಾಂಶಗಳ ಆಧಾರದ ಮೇಲೆ ನಿಖರವಾಗಿ ಹೇಳುವ ಭೌಗೋಳಿಕ ಗಡಿಯಾಗಿದೆ. (ಉದಾಹರಣೆಗೆ: ಶೃಂಗಪುರದ ನಿಖರ ಅಕ್ಷಾಂಶ-ರೇಖಾಂಶ). ಆದರೆ ಸ್ಥಾನ ಎಂಬುದು ಆ ಸ್ಥಳಕ್ಕಿರುವ ಸಾಂಸ್ಕೃತಿಕ, ಪ್ರಕೃತಿ ಮತ್ತು ಮಾನವೀಯ ಗುಣಲಕ್ಷಣಗಳನ್ನು ಸೂಚಿಸುತ್ತದೆ (ಉದಾಹರಣೆಗೆ: ಶೃಂಗಪುರವು ಮಲೆನಾಡಿನ ಭಾಗ, ಪ್ರಶಾಂತ ವಾತಾವರಣ ಹೊಂದಿದೆ ಎನ್ನುವುದು) ಎಂದು ವಿವರಿಸಿದರು. ಆಗ ನಿಧಾನವಾಗಿ ಮೇಲೆದ್ದು ನಿಂತ ರಾಗಿಣಿ ಸಾರ್, ಅಕ್ಷಾಂಶ ಮತ್ತು ರೇಖಾಂಶಗಳು ಭೂಗೋಳದ ಅಭ್ಯಾಸದಲ್ಲಿ ಏಕೆ ಅಷ್ಟೊಂದು ಮುಖ್ಯ? ಎಂದು ಪ್ರಶ್ನಿಸಿದಳು. ಆಗ ಉಪನ್ಯಾಸಕರು ರಾಗಿಣಿ, ಅಕ್ಷಾಂಶಗಳು ಭೂಮಿಯ ಮೇಲಿನ ಒಂದು ಸ್ಥಳದ ತಾಪಮಾನ ಮತ್ತು ವಾಯುಗುಣದ ವಲಯಗಳನ್ನು (ಉಷ್ಣವಲಯ, ಸಮಶೀತೋಷ್ಣವಲಯ) ನಿರ್ಧರಿಸಲು ಸಹಾಯ ಮಾಡುತ್ತವೆ. ರೇಖಾಂಶಗಳು ಪ್ರಪಂಚದ ಬೇರೆ ಬೇರೆ ದೇಶಗಳ ಸಮಯವನ್ನು ಲೆಕ್ಕಾಚಾರ ಮಾಡಲು ಅತ್ಯಗತ್ಯವಾಗಿವೆ ಎಂದು ಹೇಳಿದರು. ಕೂಡಲೇ ಕಲ್ಯಾಣಿ ಹಾಗಾದರೆ ಸಾರ್, ಭಾರತೀಯ ಪ್ರಮಾಣಿಕ ಸಮಯವನ್ನು ಹೇಗೆ ಲೆಕ್ಕ ಹಾಕುತ್ತಾರೆ? ಎಂದು ಕೇಳಿದಳು. ಆಗ ಉಪನ್ಯಾಸಕರು ಕಲ್ಯಾಣಿ, ಉತ್ತರ ಪ್ರದೇಶದ ಮಿರ್ಜಾಪುರದ ಮೂಲಕ ಹಾದುಹೋಗುವ 82.5 ಡಿಗ್ರಿ ಪೂರ್ವ ರೇಖಾಂಶವನ್ನು ಭಾರತದ ಪ್ರಮಾಣಿಕ ರೇಖಾಂಶವಾಗಿ ತೆಗೆದುಕೊಂಡಿದ್ದೇವೆ. ಇದು ಗ್ರೀನ್‌ವಿಚ್ ಶೂನ್ಯ ರೇಖಾಂಶಕ್ಕಿಂತ 5 ಗಂಟೆ 30 ನಿಮಿಷ ಮುಂಚಿತವಾಗಿದೆ ಎಂದು ಹೇಳಿದರು. ಉಪನ್ಯಾಸಕರಾದ ಶಂಕರ್ ವಲ್ಲಭಾಚಾರ್ಯರು ಇನ್ನು ಪಾಠವನ್ನು ವಿವರಿಸುತ್ತಿರುವಾಗಲೇ ಸಿಂಧು ಸಾರ್, ಜಾಗತಿಕ ಸನ್ನಿವೇಶದಲ್ಲಿ ನಮ್ಮ ಪ್ರದೇಶದ ಪ್ರಾಮುಖ್ಯತೆ ಏನು ಸಾರ್? ಎಂದು ಕೇಳಿದಾಗ, ಉಪನ್ಯಾಸಕರು ಸಿಂಧು, ನಾವು ವಾಸಿಸುವ ಈ ತುಂಗಾ ನದಿ ಜಲಾನಯನ ಪ್ರದೇಶವು ಕೇವಲ ನಮಗಷ್ಟೇ ಅಲ್ಲ, ಇಡೀ ಕರ್ನಾಟಕಕ್ಕೆ ಕುಡಿಯುವ ನೀರು ಮತ್ತು ಕೃಷಿಗೆ ನೀರಾವರಿ ಒದಗಿಸುತ್ತದೆ. ನಮ್ಮ ಪ್ರದೇಶದ ಭೌಗೋಳಿಕ ಸ್ಥಿತಿಗತಿಯು ಇಡೀ ರಾಜ್ಯದ ಆರ್ಥಿಕತೆಯ ಮೇಲೆಯೇ ಪರಿಣಾಮ ಬೀರುತ್ತದೆ ಎಂದರು. ಆಗ ಜ್ಞಾನ ಸಾರ್, ಮಾನವೀಯ ಭೂಗೋಳ ಶಾಸ್ತ್ರದಲ್ಲಿ ಜಾಗತೀಕರಣ ಮತ್ತು ತಂತ್ರಜ್ಞಾನದ ಪಾತ್ರವೇನು? ಸಾರ್ ಎಂದು ಕೇಳಿದಳು. ಅದಕ್ಕೆ ಉಪನ್ಯಾಸಕರು ಒಳ್ಳೆಯ ಪ್ರಶ್ನೆ ಜ್ಞಾನ. ತಂತ್ರಜ್ಞಾನ ಮತ್ತು ಸಾರಿಗೆ ಬೆಳೆದಂತೆ ಭೌಗೋಳಿಕ ದೂರವು ಅರ್ಥಹೀನವಾಗಿದೆ. ಪ್ರಪಂಚವು ಇವತ್ತು ಒಂದು ಜಾಗತಿಕ ಹಳ್ಳಿ ಆಗಿದೆ. ಭೂಗೋಳವು ಕೇವಲ ಬೆಟ್ಟ-ಗುಡ್ಡಗಳನ್ನು ಅಧ್ಯಯನ ಮಾಡುವುದಿಲ್ಲ, ಈ ಜಾಗತಿಕ ಸಂಪರ್ಕಗಳನ್ನು ಕಲಿಯುತ್ತದೆ ಮತ್ತು ಕಲಿಸುತ್ತದೆ ಎಂದರು. ಆಗ ಕಮಲ ಸಾರ್, ಪ್ರಕೃತಿಯಲ್ಲಿ ಸಂಭವಿಸುವ ಕಾಲೋಚಿತ ಬದಲಾವಣೆಗಳಿಗೆ ಮೂಲ ಕಾರಣವೇನು? ಎಂದು ಕೇಳಿದಳು. ಆಗ ಉಪನ್ಯಾಸಕರು ಕಮಲ, ಭೂಮಿಯು ತನ್ನ ಅಕ್ಷದಲ್ಲಿ 23.5 ಡಿಗ್ರಿಗೆ ವಾಲಿರುವುದು ಮತ್ತು ಸೂರ್ಯನ ಸುತ್ತ ತನ್ನ ಕಕ್ಷೆಯಲ್ಲಿ ಸುತ್ತುವುದು (ಪರಿಭ್ರಮಣೆ) – ಇವೆರಡೂ ಪ್ರಮುಖ ಕಾರಣಗಳು. ಇದರಿಂದಾಗಿಯೇ ನಮಗೆ ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಗಳು ಬದಲಾಗುತ್ತಿರುತ್ತವೆ ಎಂದರು. ಕೂಡಲೇ ಸುರಭಿ ಸಾರ್, ಭೂಗೋಳದಲ್ಲಿ ಜೀವಗೋಳ ಎಂದರೆ ಏನು? ಎಂದು ಕೇಳಿದಳು. ಅದಕ್ಕೆ ಉಪನ್ಯಾಸಕರು ಸುರಭಿ, ಶಿಲಾಗೋಳ , ಜಲಗೋಳ , ಮತ್ತು ವಾಯುಗೋಳ – ಈ ಮೂರೂ ಗೋಳಗಳು ಒಂದಕ್ಕೊಂದು ಸಂಧಿಸಿ, ಜೀವಿಗಳು ಬದುಕಲು ಸೂಕ್ತವಾದ ಪರಿಸರ ನಿರ್ಮಾಣವಾಗುವ ಕಿರಿದಾದ ವಲಯವನ್ನೇ ನಾವು ಜೀವಗೋಳ ಎನ್ನುತ್ತೇವೆ ಎಂದು ಉತ್ತರಿಸಿದರು. ಮೇಘ ಸಾರ್, ಭವಿಷ್ಯದಲ್ಲಿ ಭೂಗೋಳ ಶಾಸ್ತ್ರಜ್ಞರಿಗೆ ಇರುವ ಉದ್ಯೋಗಾವಕಾಶ ಗಳು ಯಾವುವು? ತಿಳಿಸಿರಿ ಎಂದಳು. ಆಗ ಉಪನ್ಯಾಸಕರು ಮೇಘ, ಇಂದಿನ ಡಿಜಿಟಲ್ ಯುಗದಲ್ಲಿ ಭೂಗೋಳ ಕಲಿಯುವವರಿಗೆ ಅಪಾರ ಅವಕಾಶಗಳಿವೆ! ವಿಶ್ಲೇಷಕರು, ನಗರಾಭಿವೃದ್ಧಿ ಯೋಜನಾಧಿಕಾರಿಗಳು, ಹವಾಮಾನ ತಜ್ಞರು, ಉಪಗ್ರಹ ದತ್ತಾಂಶ ವಿಶ್ಲೇಷಕರು ಮತ್ತು ಪರಿಸರ ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಣೆ ಮಾಡಬಹುದು ಎಂದ ಉಪನ್ಯಾಸಕ ಶಂಕರ್ ವಲ್ಲಭಾಚಾರ್ಯ ಪ್ರಿಯ ವಿದ್ಯಾರ್ಥಿಗಳೇ, ಭೂಮಿ ಎಂಬುದು ಜೀವಂತ ಗ್ರಹ. ಅದನ್ನು ಕೇವಲ ಪರೀಕ್ಷೆಯ ದೃಷ್ಟಿಯಿಂದ ಓದದೆ, ಅದರ ಚಲನೆ, ವಾಯುಗುಣ, ಪರಿಸರ ವ್ಯವಸ್ಥೆಗಳನ್ನು ದಿನನಿತ್ಯದ ಅನುಭವದೊಂದಿಗೆ ಗ್ರಹಿಸಿ. ಶೃಂಗಪುರದ ಈ ರಮಣೀಯ ವಾತಾವರಣವು ನಿಮಗೊಂದು ಅತ್ಯುತ್ತಮ ಭೌಗೋಳಿಕ ಪ್ರಯೋಗಾಲಯವಿದ್ದಂತೆ! ಎಂದರು. ಆಗ ಎಲ್ಲಾ ವಿದ್ಯಾರ್ಥಿಗಳು ಹರ್ಷದಿಂದ ಚಪ್ಪಾಳೆ ತಟ್ಟಿ, ಭೂಗೋಳದ ಹೊಸ ವಿಷಯಗಳನ್ನು ತಿಳಿದುಕೊಂಡ ಸಂತಸದಿಂದ ತರಗತಿಯನ್ನು ಮುಕ್ತಾಯಗೊಳಿಸಿದರು.







– **ಕೆ.ಎನ್. ಚಿದಾನಂದ** (ನಾನಂಚಿ) ಹಾಸನ

# ರುಚಿಕರ ಶೀರ್ಮಲ್

ಮನುಷ್ಯನ ಬಾಯಿ ರುಚಿಗೆ ಯಾವುದೇ ಸೀಮೆಗಳಿಲ್ಲ. ನಮ್ಮ ನಾಲಿಗೆಗೆ ರುಚಿ ತಿಳಿಸುವ ಗುಣ ಇಲ್ಲದೇ ಹೋಗಿದ್ದರೆ ಬಹುಷಃ ಪ್ರಪಂಚದಲ್ಲಿ ಇಷ್ಟೊಂದು ಬಗೆಯ ವೈವಿಧ್ಯಮಯ ತಿಂಡಿ ತಿನಸು, ಸಿಹಿ ತಿಂಡಿಗಳು, ಖಾರ ತಿಂಡಿಗಳು, ಕಣ್ಣನ ಸೆಳೆಯುವ ಆಹಾರಗಳು ಇರುತ್ತಿರಲಿಲ್ಲ. ಈ ಆಹಾರ ಪದ್ಧತಿಗಳು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಾ ಹೋಗುತ್ತವೆ. ದಕ್ಷಿಣ ಭಾರತದ ಖ್ಯಾತ ತಿಂಡಿ ಉತ್ತರ ಭಾರತದಲ್ಲಿ ಸಿಗದೇ ಇರಬಹುದು. ಪರಿಚಯವೂ ಇರಲಾರದು. ಹಾಗೆಯೇ ರಾಜಸ್ಥಾನದ ಖಾದ್ಯಗಳು ಕೋಲ್ಕತ್ತಾದಲ್ಲಿ ಇರಲಿಕ್ಕಿಲ್ಲ. ಕೋಲ್ಕತ್ತಾದ ಬೆಂಗಾಲಿ ಸಿಹಿ ತಿಂಡಿಗಳು ಯಾರ ಬಾಯಲ್ಲೂ ನೀರೂರಿಸಬಹುದು. ನಾಲಗೆಯ ರುಚಿಯನ್ನು ತಣಿಸಲು ಮಾನವ ಬಹಳಷ್ಟು ಸಾಹಸಗಳನ್ನೂ ಮಾಡುತ್ತಾ ಇರುತ್ತಾನೆ.



ಬಹಳಷ್ಟು ಸಲ ನಾವು ಬೇರೆ ಸ್ಥಳಗಳಿಗೆ ಪ್ರವಾಸ ಹೋದಾಗ ಅಲ್ಲಿನ ವಿಶೇಷತೆಗಳ ಜೊತೆ ಸ್ಥಳೀಯ ತಿಂಡಿಗಳ ಬಗ್ಗೆಯೂ ತಿಳಿದುಕೊಳ್ಳಬೇಕು. ಏಕೆಂದರೆ ಕೆಲವು ತಿಂಡಿಗಳು ಅಲ್ಲಿಯ ಸಂಸ್ಕೃತಿಯ ಜೊತೆ ತಳುಕು ಹಾಕಿಕೊಂಡಿರುತ್ತದೆ. ತಿಂಡಿ ತಿನ್ನುತ್ತಾ ಅಲ್ಲಿಯ ಇತಿಹಾಸದ ಬಗ್ಗೆಯೂ ನಾವು ಅರಿತುಕೊಳ್ಳಬಹುದು. ರಾಜ ಮಹಾರಾಜರು ಇಷ್ಟ ಪಟ್ಟು ತಿನ್ನುತ್ತಿದ್ದ, ವಿಶೇಷವಾಗಿ ರಾಣಿಯರಿಗಾಗಿ ತಯಾರಾಗುತ್ತಿದ್ದ ಅಥವಾ ತಮ್ಮ ಕುಲ ದೇವರಿಗೆ ಅರ್ಪಿಸುತ್ತಿದ್ದ ವಿಶೇಷ ಭಕ್ಷ್ಯಗಳ ಬಗ್ಗೆಯೂ ಮಾಹಿತಿ ಸಿಗಬಹುದು. ನೀವು ಉತ್ತರ ಪ್ರದೇಶಕ್ಕೆ ಪ್ರವಾಸ ಹೋದಾಗ ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದರ ಜೊತೆಗೆ ಅಲ್ಲಿಯ ವಿಶೇಷ ಸಿಹಿ ತಿಂಡಿಯಾದ ಶೀರ್ಮಲ್ ಬಗ್ಗೆ ತಿಳಿದುಕೊಳ್ಳಲೇ ಬೇಕು. ಈ ಸಿಹಿ ತಿಂಡಿಗೆ ಬಹು ಬೇಡಿಕೆ ಇರುವ ಕಾರಣ ಹಲವಾರು ಬಾರಿ ನಿಮಗೆ ಬೇರೆ ಬೇರೆ ಅಂಗಡಿಗಳನ್ನು ಸುತ್ತುವಂತೆ ಮಾಡಬಲ್ಲದು.

ಈ ಶೀರ್ಮಲ್ ಗೆ ಕೇವಲ ಭಾರತದಲ್ಲಷ್ಟೇ ಅಲ್ಲ ಇರಾನ್, ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದಲ್ಲೂ ಅಭಿಮಾನಿಗಳಿದ್ದಾರೆ. ಮೈದಾ, ತುಪ್ಪ, ಹಾಲು ಮತ್ತು ಕೇಸರಿ ಬಳಸಿ ತಯಾರಿಸಲಾಗುವ ಈ ತಿಂಡಿಯನ್ನು ಯತೇಚ್ಚವಾದ ಬೆಣ್ಣೆ ಮತ್ತು ಜೇನುತುಪ್ಪ ಸವರಿ ಬೇಯಿಸಲಾಗುತ್ತದೆ. ಕೆಲವು ತಯಾರಕರು ಇದರ ಮೇಲೆ ಬಾದಾಮಿ ಮತ್ತು ಗೋಡಂಬಿ ಚೂರುಗಳನ್ನು ಉದುರಿಸಿ ಮತ್ತಷ್ಟು ಆಕರ್ಷಣೀಯ ಹಾಗೂ ಸ್ವಾದಿಷ್ಟವಾಗುವಂತೆ ಮಾಡುತ್ತಾರೆ.

ಇದೊಂಥರಾ ನಾನ್ ಕುಲ್ಚಾ ರೊಟ್ಟಿಯ ಹಾಗಿದ್ದು ತಿನ್ನಲು ಬಲು ರುಚಿಕರವಂತೆ. ಲಕ್ನೋದ ಹಳೆಯ ಸಿಹಿ ತಿಂಡಿ ತಯಾರಕರಲ್ಲಿ ಸಿಗುವ ಈ ತಿಂಡಿಗೆ ಮದುವೆ, ಹುಟ್ಟು ಹಬ್ಬ ಇನ್ನಿತರ ಶುಭ ಸಮಾರಂಭಗಳಲ್ಲಿ ಅಗ್ರ ಸ್ಥಾನವಿದೆ. ನಮ್ಮಲ್ಲಿ ಚಿರೋಟಿ-ಹಾಲು ಇರುವಂತೆ ಅಲ್ಲಿ ಶೀರ್ಮಲ್ ಬಡಿಸುತ್ತಾರೆ.

ಶೀರ್ಮಲ್ ನ ಸ್ವಾದಕ್ಕೆ ಮರೆಹೋಗಿರುವ ಕೆಲವರು ತಮ್ಮ ಬೆಳಿಗ್ಗೆಯ ತಿಂಡಿಗೂ ಇದನ್ನೇ ತಿನ್ನುತ್ತಾರೆ. ಬಡವ ಬಲ್ಲಿದನೆನ್ನುವ ಬೇಧಭಾವವಿಲ್ಲದೇ ಎಲ್ಲರ ಮನ ಗೆದ್ದ ತಿಂಡಿ ಇದು. ಉತ್ತರ ಪ್ರದೇಶದ ಬಹಳಷ್ಟು ಮನೆಗಳಲ್ಲಿ ಈ ತಿಂಡಿಯನ್ನು ತಯಾರಿಸುತ್ತಾರೆ. ಹಳೆಯ ಸಿಹಿ ತಿಂಡಿಗಳನ್ನು ಮಾರುವ ಅಂಗಡಿಗಳಲ್ಲೂ ಲಭ್ಯವಿದೆ. ಹಾಗಾದರೆ ಮುಂದೆ ಎಂದಾದರೂ ಉತ್ತರ ಪ್ರದೇಶಕ್ಕೆ ಪ್ರವಾಸ ಹೋದರೆ ಶೀರ್ಮಲ್ ತಿನ್ನಲು ಮಾತ್ರ ಮರೆಯ ಬೇಡಿ!

– **ಕೆ.ಪಿ.ಅಶ್ವಿನ್** ರಾವ್

# ಸಾಚಾ ಗೆಳೆಯರೇ ನಮ್ಮ ಸಂಪತ್ತು

ನಮಗೆ ಗೆಳೆಯರು ಬೇಕೇ ಬೇಕು. ಬಾಲ್ಯದಲ್ಲಿ ಹಲವರ ಜೊತೆ ಗೆಳೆತನ ಬೆಳೆಸಿಕೊಳ್ಳುತ್ತೇವೆ. ಆಗಿನದು ಮುಗ್ಧ ಮನಸ್ಸು. ಆ ಗೆಳೆತನಗಳಲ್ಲಿ ಲೆಕ್ಕಾಚಾರಗಳು ಇರೋದಿಲ್ಲ. ಇತರರನ್ನು ತೂಗಿ ನೋಡುವ ಪ್ರಬುದ್ಧತೆಯೂ ನಮ್ಮಲ್ಲಿ ಬೆಳೆದಿರೋದಿಲ್ಲ.

ವಯಸ್ಸಾದಂತೆ ಗೆಳೆತನ ಬೆಳೆಸಿಕೊಳ್ಳುವಾಗ ಜಾಗ್ರತೆ ವಹಿಸುತ್ತೇವೆ. ಯಾಕೆಂದರೆ ಎಲ್ಲರನ್ನೂ ತೂಗಿ ನೋಡಲು ಕಲಿತಿರುತ್ತೇವೆ. ಈ ವ್ಯಕ್ತಿಯ ಜೊತೆ ಸ್ನೇಹ ಮಾಡಿಕೊಂಡರೆ ಈಗ ಏನು ಲಾಭ ಆದೀತು? ಮುಂದೇನು ಲಾಭವಾದೀತು? ಎಂಬ ಪ್ರಶ್ನೆಗಳೇ ಮುಖ್ಯವಾಗುತ್ತವೆ.



ಈ ಎರಡು ಪ್ರಶ್ನೆಗಳ ಆಧಾರದಿಂದ ಶುರು ಮಾಡಿದ ಗೆಳೆತನ ದೀರ್ಘ ಕಾಲ ಉಳಿಯೋದಿಲ್ಲ. ಆದರೆ, ಇನ್ನೊಬ್ಬ ವ್ಯಕ್ತಿಯನ್ನು ಅರ್ಥ ಮಾಡಿಕೊಂಡು, ಪರಸ್ಪರ ಗೌರವ, ಮೆಚ್ಚುಗೆ, ಪ್ರೀತಿಯ ಅಡಿಗಟ್ಟಿನ ಮೇಲೆ ಕಟ್ಟಿದ ಸ್ನೇಹಸೌಧ ದೀರ್ಘ ಕಾಲ ಉಳಿಯುತ್ತದೆ.

ಇಂದಿನ ಸಮಾಜದಲ್ಲಿ ಪ್ರತಿಯೊಬ್ಬರಿಗೂ ಸಾಚಾ ಗೆಳೆಯರು ಕೆಲವೇ ಕೆಲವರು. ಉಳಿದವರೆಲ್ಲ ಕೇವಲ ಪರಿಚಿತರು ಅಥವಾ ಯಾವುದೋ ನಿರ್ದಿಷ್ಟ ಉದ್ದೇಶಕ್ಕಾಗಿ ಸಂಪರ್ಕ ಉಳಿಸಿಕೊಂಡವರು, ಅಲ್ಲವೇ?

ಈ ಸಂಪರ್ಕ ಉಳಿಸಿಕೊಂಡ ವ್ಯಕ್ತಿಗಳು ಮತ್ತು ಸಾಚಾ ಗೆಳೆಯರ ನಡುವೆ ದೊಡ್ಡ ವ್ಯತ್ಯಾಸ ಇರುತ್ತದೆ. ಮೊದಲ ವರ್ಗದ ವ್ಯಕ್ತಿಗಳೊಡನೆ ಮನಸ್ಸು ಬಿಚ್ಚಿ ಮಾತನಾಡಲಾಗದು. ಎರಡನೇ ವರ್ಗದವರೊಡನೆ ಮುಚ್ಚುಮರೆಯಿಲ್ಲದೆ ಮಾತುಕತೆ ಸಾಧ್ಯ. ನಿಮಗೆ ನಿಮ್ಮೂರಿನಲ್ಲಿ ಇಂತಹ ಎಷ್ಟು ಗೆಳೆಯರಿದ್ದಾರೆ ಲೆಕ್ಕ ಮಾಡಿ. ಇಂತಹ ಐದಾರು ಗೆಳೆಯರಿದ್ದರೆ ನೀವು ಪುಣ್ಯವಂತರು.

ವಯಸ್ಸು ಅರುವತ್ತು ದಾಟಿದಾಗ ಸಾಚಾ ಗೆಳೆಯರೇ ನಮ್ಮ ನಿಜವಾದ ಸಂಪತ್ತು ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ಸಾಚಾ ಗೆಳೆಯರನ್ನು ಕೊನೆಯವರೆಗೂ ಉಳಿಸಿಕೊಳ್ಳಲು ಎಚ್ಚರದಿಂದಿರಿ. ಏನೇ ಭಿನ್ನಾಭಿಪ್ರಾಯ ಮೂಡಿದರೂ ಆಗಾಗಲೇ ಪರಿಹರಿಸಿಕೊಳ್ಳಿರಿ. ಇಲ್ಲವಾದರೆ ಗೆಳೆಯರೇ ಇಲ್ಲವಾಗಿ ನಂತರ ಒಬ್ಬಂಟಿತನ ಕಾಡುತ್ತದೆ. ಹಾಗಾಗಬಾರದು ಎಂದಾದರೆ, ಬದುಕು ಕ್ಷಣಿಕವೆಂಬ ಎಚ್ಚರ ಯಾವಾಗಲೂ ಜಾಗೃತವಾಗಿರಲಿ.

– **ಅಡ್ಡೂರು** ಕೃಷ್ಣ ರಾವ್

# ಭಾವ ಲಹರಿ

## ಅಗೌರವದ ಸಂಸ್ಕೃತಿಯತ್ತ ಸಾಗುತ್ತಿರುವ ಜೆನ್ ಝೀ

> ಪ್ರೀತಿ, ಪ್ರೇಮ, ರಾಷ್ಟ್ರಪ್ರೇಮ, ವಿವಾಹ, ರಾಷ್ಟ್ರೀಯತೆ, ಘನತೆ ಇಂತಹ ಎಲ್ಲ ಪರಿಕಲ್ಪನೆಗಳನ್ನು ಆತ ಹಾಸ್ಯ ಮಾಡಿದ. ನಾಶಮಾಡಿದ. ಉದಾಹರಣೆಗೆ ಶಾನ ಆರ್ಮ್ಸ್ ಆಂಡ್ ದ ಮ್ಯಾನ್ ನಾಟಕದಲ್ಲಿ ಕೇಂದ್ರ ಪಾತ್ರವಾಗಿ ಬರುವವನು ಒಬ್ಬ ಅಸಹ್ಯ ಮೋರೆಯ ಸೈನಿಕ. (ಸೈನಿಕರು ಆಕರ್ಷಕವಾಗಿರುತ್ತಾರೆ. ಅದನ್ನು ಗೇಲಿ ಮಾಡಲೇ ಶಾ ಈ ಪಾತ್ರ ಸೃಷ್ಟಿಸಿದ.) ಸೈನಿಕ ಹೇಳುತ್ತಾನೆ.

ತಲೆಮಾರು ಜೆನ್ ಝೀ ದೆಹಲಿ ಪ್ರತಿಭಟನೆಯ ಸಂದರ್ಭದ ಒಂದು ಸಂಗತಿ: ತನಗೆ ಹದಿನೈದು ವರ್ಷ ಎಂದು ಹೇಳಿಕೊಂಡ ಇಪ್ಪತ್ತೈದು ವರ್ಷದ ಹುಡುಗಿ ಒಬ್ಬಳು ಪ್ರಧಾನಿ ಮೋದಿಯವರ ಮತ್ತು ಸ್ವರ್ಗಸ್ಥರಾಗಿರುವ ಅವರ ತಾಯಿಯ ಕುರಿತು ಹೊಲಸು ಮಾತನಾಡಿಬಿಟ್ಟಳು. ಎಂತಹ ಅಸಹ್ಯ ಮಾತುಗಳೆಂದರೆ ಕೇಳಿದವರು ಅರೆಕ್ಷಣ ಥಂಡಾಗಿ ಬಿಟ್ಟರು.

ದೇಶ ಸಾಂಸ್ಕೃತಿಕ ಆಘಾತ ಅನುಭವಿಸಿತು. ಏಕೆಂದರೆ ಸಾಮಾನ್ಯವಾಗಿ ನಮ್ಮ ಸಾಂಸ್ಕೃತಿಕ ಗ್ರಹಿಕೆಯಲ್ಲಿ ಇಂತಹ ಕೊಳಕು ಮಾತುಗಳನ್ನು ಯಾರೂ ಸಾರ್ವಜನಿಕವಾಗಿ ಆಡುವುದಿಲ್ಲ. ಪ್ರಧಾನಿಯಂತಹ ಹಿರಿಯರ, ಅವರ ತಾಯಿಯ ಕುರಿತು ಆಡುವುದಿಲ್ಲ. ಆದರೆ ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ, ಜೆನ್ ಝೀ ಸಂಪರ್ಕದಲ್ಲಿ ಕೆಲಸ ಮಾಡಿದ ನಮ್ಮಂತವರಿಗೆ ಗೊತ್ತಿದೆ. ಏನೆಂದರೆ ಇಂತಹ ಮಾತು ಜೆನ್ ಝೀಯ ಒಂದು ವರ್ಗದ ನಾಲಿಗೆಯ ತುದಿಯ ಮೇಲಿದೆ. ಅದು ಯಾರಿಗೆ ಏನು ಬೇಕಾದರೂ ಮಾತನಾಡುತ್ತದೆ. ಏಕೆಂದರೆ ಆ ವರ್ಗ ಪಾಶ್ಚಾತ್ಯ ಸಂಸ್ಕೃತಿಯ ತೀವ್ರ ಪ್ರಭಾವದಲ್ಲಿದೆ.

ದೆಹಲಿಯಲ್ಲಿ ಬಂದ ಮಾತು ಕೇವಲ ಒಂದು ಹುಡುಗಿಯ ಮಾತಲ್ಲ. ಅದು ಒಂದು ಅನ್ಯ ಸಂಸ್ಕೃತಿಯ ಮಾತು. ಹೆಚ್ಚಾಗಿ ನಮ್ಮ ಸಂಸ್ಕೃತಿಯ ಬೇರುಗಳನ್ನು ಕಳೆದುಕೊಂಡಿರುವ, ವಿಪರೀತ ಕುಡಿತ, ಡ್ರಗ್, ಪೋರ್ನೋಗ್ರಫಿ (ವಿಕೃತ ಲೈಂಗಿಕತೆ) ಇತ್ಯಾದಿಗಳ ದೋಸ್ತಿಯಲ್ಲಿರುವ, ಮಾನಸಿಕ ವಾಗಿ ಅಸ್ತವ್ಯಸ್ತವಾಗಿರುವ, ಜೆನ್ ಝೀಯ ಒಂದು ವರ್ಗ ಇಂತಹ ಮಾತನಾಡುತ್ತದೆ.

ನಾನೇ ಕೇಳಿರುವಂತೆ ಪ್ರಿನ್ಸಿಪಲ್ ಆಯಾರೇ, ಮಿನಿಸ್ಟರ್ ಭೋಸುಡಿಕೆ ಗಯಾರೇ ಬುಡ್ಡಾ ರಾಂಡಕೇ ಆಯಾರೇ (ಪ್ರೊಫೆಸರ್ ಕುರಿತು) ಲೌಡೇ ಇಂತಹ ಮಾತುಗಳನ್ನು ಆಡುವುದೇ ಜೆನ್ ಝೀಯ ಒಂದು ವರ್ಗದ ಫ್ಯಾಶನ್ ಮತ್ತು ಸಂಸ್ಕೃತಿಯಾಗಿ ಹೋಗಿದೆ. ಅಪಾಯಕಾರಿ ವಿಷಯ ಇದು. ಯಾಕೆ ಅಪಾಯಕಾರಿ ಎಂದು ಹೇಳುವ ಮೊದಲು ಇಂತಹ ವಿಕೃತ ಮಾತಿನ ಮತ್ತು ಅದರ ಹಿಂದಿರುವ ಅಗೌರವದ ಸಂಸ್ಕೃತಿಯ ಕಥೆ ಹೇಳಿಕೊಳ್ಳ ಬೇಕು.

ಇಂತಹ ಮನಸ್ಥಿತಿ ಹುಟ್ಟಿಕೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿ. ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಹುಟ್ಟಿಕೊಂಡ ಎರಡು ಮಹತ್ತರ ಪ್ರಭಾವಗಳು ಇದಕ್ಕೆ ಕಾರಣವಾದವು. ಒಂದನೆಯದು ಮಾರ್ಕ್ಸ್‌ವಾದದ ಸಾಮಾಜಿಕ ಪ್ರಭಾವ. ಎರಡನೆಯದು ಮನಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್‌ನ ಶೋಧನೆಗಳ ಸಾಮಾಜಿಕ ಪ್ರಭಾವ. ಕಾರ್ಲ್ ಮಾರ್ಕ್ಸ್ ಒಂದು ಪ್ರಸಿದ್ಧ ಮಾತು ಹೇಳಿದ. ಏನೆಂದರೆ ಒಂದು ಯುಗವನ್ನು ಆಳುವ ವಿಚಾರಗಳು ಯುಗವನ್ನು ಆಳುವವರ ವಿಚಾರಗಳಾಗಿರುತ್ತವೆ. ಈ ಮಾತು ಮಾರ್ಕ್ಸ್ ಸೃಷ್ಟಿಸಿದ ಸಮಾಜಕ್ಕೇ ಸತ್ಯವಾಗಿ ಹೋಯಿತು. ಹೇಗೆಂದರೆ ರಶಿಯಾ ಮತ್ತಿತರ ದೇಶಗಳಲ್ಲಿ ನಡೆದ ರಕ್ತಸಿಕ್ತ ಕ್ರಾಂತಿಗಳ ಫಲವಾಗಿ ಅಂದಿನ ಯೂರೋಪಿಯನ್ ಸಮಾಜ ತಲೆಕೆಳಗಾಗಿ ಹೋಯಿತು.

ಮೊದಲು ಸಮಾಜವನ್ನು ಆಳಿದ್ದ ಉನ್ನತ ಹಾಗೂ ಮಧ್ಯಮವರ್ಗಗಳು (ಬಂಡವಾಳಶಾಹಿ ಮತ್ತು ಬೂರ್ಜ್ವಾಸೀ ವರ್ಗ) ಈಗ ತಮ್ಮ ಅಧಿಕಾರ ಕಳೆದುಕೊಂಡು ಕೆಳಸ್ತರಕ್ಕೆ ಬಂದು ನಿಂತವು. ಹಿಂದೆ ಕೆಳಸ್ತರದಲ್ಲಿದ್ದ ಕಾರ್ಮಿಕ ವರ್ಗ (ಪ್ರೊಲೆಟೇರಿಯಟ್) ಈಗ ಅಧಿಕಾರದ ಸ್ಥಾನಗಳನ್ನು ಆಕ್ರಮಿಸಿತು. ಪರಿಣಾಮವಾಗಿ ಸೃಷ್ಟಿಯಾಗಿದ್ದು ಒಂದು ಬೃಹತ್ ಸಾಮಾಜಿಕ, ಸಾಂಸ್ಕೃತಿಕ ಕ್ರಾಂತಿ. ಅದರ ಫಲವಾಗಿ ಸಮಾಜಗಳು ಕಾಪಾಡಿಕೊಂಡು ಬಂದಿದ್ದ ಮೌಲ್ಯಗಳ ವ್ಯವಸ್ಥೆ ತಲೆಕೆಳಗಾಗಿ ಹೋಯಿತು.

ಹೊಸ ಮೌಲ್ಯಗಳ ವ್ಯವಸ್ಥೆ ಹುಟ್ಟಿಕೊಳ್ಳಲಿಲ್ಲ. ಏಕೆಂದರೆ ಈಗ ಅಧಿಕಾರಕ್ಕೆ ಬಂದ ಯುರೋಪಿಯನ್ ಕಾರ್ಮಿಕ ವರ್ಗಕ್ಕೆ ಒಂದು ಸ್ಪಷ್ಟವಾದ ನೈತಿಕ ಅಥವಾ ಈಸ್ಥೆಟಿಕ್ (ಕಲೆ, ಸೌಂದರ್ಯ, ಇತಿಹಾಸ, ಪರಂಪರೆ ಇತ್ಯಾದಿ ಹೊಂದಿದ) ಮೌಲ್ಯಗಳ ಒಂದು ಸೆಟ್ ಇರಲಿಲ್ಲ. (ಭಾರತೀಯ ದುಡಿಯುವ ವರ್ಗ ಸಾಂಸ್ಕೃತಿಕವಾಗಿ ದಿವಾಳಿಯಾದ ವರ್ಗವಲ್ಲ. ಅದು ಬೇರೆಯ ವಿಷಯ.) ಈಗ ಅಧಿಕಾರಕ್ಕೆ ಬಂದ ಇಲ್ಲದವರ ಏಕೈಕ ಗುರಿಯಾಗಿದ್ದುದು ಹಿಂದಿನ ಸಂಸ್ಕೃತಿಯನ್ನು ನಾಶ ಮಾಡುವುದು. (ಭಾರತದಲ್ಲಿ ಸಮಾಜವಾದ ಮಾಡಿದ್ದೂ ಇದೇ). ಹಾಗಾಗಿ ಯುರೋಪಿನಲ್ಲಿ ಈಗ ಉಳ್ಳ ವರ್ಗದ ಇತಿಹಾಸ ಮತ್ತು ಸಂಸ್ಕೃತಿಯನ್ನು ಗೇಲಿ ಮಾಡುವ, ಧಿಕ್ಕರಿಸುವ ಸಂಪ್ರದಾಯ ಆರಂಭವಾಯಿತು. ಹಿಂದೆ ಗೌರವಾನ್ವಿತವೆಂದು ಪರಿಗಣಿಸಲಾಗಿದ್ದ ಮೌಲ್ಯಗಳು ಈಗ ಹಾಸ್ಯಾಸ್ಪದ ವಾದವು. ಉದಾಹರಣೆಗೆ ಫೋಬಿಯನ್ ಸಮಾಜವಾದದಿಂದ ಪ್ರೇರೇಪಿತನಾಗಿದ್ದ ಜಾರ್ಜ್ ಬರ್ನಾರ್ಡ್ ಶಾ ಹಿಂದಿನ ಎಲ್ಲ ಪೂಜನೀಯ ಮೌಲ್ಯಗಳನ್ನು ಲೇವಡಿ ಮಾಡಿದ.




ಪ್ರೀತಿ, ಪ್ರೇಮ, ರಾಷ್ಟ್ರಪ್ರೇಮ, ವಿವಾಹ, ರಾಷ್ಟ್ರೀಯತೆ, ಘನತೆ ಇಂತಹ ಎಲ್ಲ ಪರಿಕಲ್ಪನೆಗಳನ್ನು ಆತ ಹಾಸ್ಯ ಮಾಡಿದ. ನಾಶಮಾಡಿದ. ಉದಾಹರಣೆಗೆ ಶಾನ ಆರ್ಮ್ಸ್ ಆಂಡ್ ದ ಮ್ಯಾನ್ ನಾಟಕದಲ್ಲಿ ಕೇಂದ್ರ ಪಾತ್ರವಾಗಿ ಬರುವವನು ಒಬ್ಬ ಅಸಹ್ಯ ಮೋರೆಯ ಸೈನಿಕ. (ಸೈನಿಕರು ಆಕರ್ಷಕವಾಗಿರುತ್ತಾರೆ. ಅದನ್ನು ಗೇಲಿ ಮಾಡಲೇ ಶಾ ಈ ಪಾತ್ರ ಸೃಷ್ಟಿಸಿದ.) ಸೈನಿಕ ಹೇಳುತ್ತಾನೆ. ಏನೆಂದರೆ ನಾನು ಯಾವಾಗಲೂ ಯುದ್ಧ ಮಾಡಿಯೇ ಇಲ್ಲ. ಓಡಿ ಹೋಗಿ ನನ್ನ ಪ್ರಾಣ ಕಾಪಾಡಿಕೊಳ್ಳುವುದಷ್ಟೇ ನನ್ನ ಕೆಲಸ. ದೇಶಪ್ರೇಮ ಇತ್ಯಾದಿಗಳಿಗಾಗಿ ನಾನ್ಯಾಕೆ ಪ್ರಾಣ ತೆರಲಿ? ಹಾಗೆಯೇ ಆತ ಹೇಳುತ್ತಾನೆ.

ನನ್ನ ಕಿಸೆಯಲ್ಲಿ ಮದ್ದು ಗುಂಡು ತುಂಬಿರುವುದಿಲ್ಲ. ನಾನು ಚಾಕಲೇಟ್‌ಗಳನ್ನು ಇಟ್ಟುಕೊಳ್ಳುತ್ತೇನೆ. ಏಕೆಂದರೆ ಗುಂಡು ಖಾಲಿಯಾಗಿ ಹೋದರೆ ಓಡಿ ಹೋಗಿ ಬದುಕಬಹುದು. ತಿನ್ನಲು ಇಲ್ಲವಾದರೆ ಏನು ಮಾಡುವುದು? ಇಂತಹ ಸೈನಿಕ ಒಂದು ದಿನ ರಣರಂಗದಿಂದ ತಪ್ಪಿಸಿಕೊಂಡು ಓಡುತ್ತಿರುವಾಗ ಅಕಸ್ಮಾತ್ ಸುಂದರಿಯೋರ್ವಳ ಬೆಡ್ ರೂಂ ಪ್ರವೇಶಿಸಿಬಿಡುತ್ತಾನೆ. ಹೊರಗೆ ತಿಂಗಳ ಬೆಳಕು. ಒಳಗೆ ಬೆಳದಿಂಗಳಿನಂತಹ ಸುಂದರಿ.

ಸಾಮಾನ್ಯವಾಗಿ ಓದುಗ ನಿರೀಕ್ಷಿಸುವುದೆಂದರೆ ಈಗ ಆತ ಆಕೆಯ ಜತೆ ಪ್ರೇಮದಲ್ಲಿ ಬೀಳುತ್ತಾನೆ. ನೀನಿಲ್ಲದೆ ನಾನು ಬದುಕಲಾರೆ ಎನ್ನುತ್ತಾನೆ ಎನ್ನುವುದು. ಆದರೆ ಆ ಸೈನಿಕ ಅಂತಹ ಮಾತು ಆಡುವುದೇ ಇಲ್ಲ. ಬದಲಿಗೆ ಆತ ಹೇಳುತ್ತಾನೆ. ನೀನು ಸುಂದರಿ ಇರಬಹುದು. ಆದರೆ ನಿನ್ನ ಜತೆ ನಾನು ಪ್ರೇಮದಲ್ಲಿ ಬಿದ್ದು ಬಿಡುತ್ತೇನೆ ಇತ್ಯಾದಿ ಭಾವಿಸಿಕೊಳ್ಳಬೇಡ. ಇಲ್ಲಿಯ ತನಕ ಯಾರನ್ನೂ ಕೊಂದಿಲ್ಲ. ಆದರೆ ಕೂಗಿ ಗದ್ದಲ ಮಾಡಿದರೆ ನಿನ್ನನ್ನು ಕೊಲ್ಲುವುದು ಖಂಡಿತ. ಹೀಗೆ ಮೌಲ್ಯಗಳನ್ನು ಧಿಕ್ಕರಿಸುವ ಸೈನಿಕ ನಮಗೆ ಸಾಂಸ್ಕೃತಿಕ ಆಘಾತ ನೀಡಿಬಿಡುತ್ತಾನೆ. ಶಾನ ಇನ್ನೊಂದು ನಾಟಕ ಮಿಸಸ್ ವಾರನ್ಸ್ ಪ್ರೊಫೆಶನ್ ಇರುವುದು ಒಬ್ಬ ವೇಶ್ಯೆಯ ಕುರಿತು. ಎಂತಹ ನಾಟಕವೆಂದರೆ ಅದು ಗೃಹಿಣಿಯರನ್ನೇ, ವಿವಾಹದ ವ್ಯವಸ್ಥೆಯನ್ನೇ ಗೇಲಿ ಮಾಡುತ್ತದೆ.

ಬರ್ನಾರ್ಡ್ ಶಾ ಕಲೆ ಇತ್ಯಾದಿ ಪರಿಕಲ್ಪನೆಗಳನ್ನೂ ಹಾಸ್ಯ ಮಾಡಿದ. ಕಲೆಗಾಗಿ ಬರೆಯುವುದಿದ್ದರೆ ಒಂದು ಅಕ್ಷರವನ್ನೂ ತಾನು ಬರೆಯುತ್ತಿರಲಿಲ್ಲ ಎಂದು ಹೇಳಿದ. ಜತೆಯೇ ಆತ ಪ್ರೇಮ ಪ್ರೀತಿ ಸಂಬಂಧಗಳು ಗೌರವ, ಘನತೆ ಅಂತಹ ಪರಿಕಲ್ಪನೆಗಳನ್ನು ಕೀಳಾಗಿ ನೋಡಿದ. ಗಂಡು ಹೆಣ್ಣಿನ ನಡುವೆ ಇರುವ ಆಕರ್ಷಣೆ ಪ್ರೇಮವಲ್ಲ. ಟ್ರೂ ಲವ್ ಇತ್ಯಾದಿ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಗಂಡು ಹೆಣ್ಣಿನ ಸಂಬಂಧ ಕಾಮದ ಅಗತ್ಯದ್ದು ಮಾತ್ರ ಎಂದು ಆತ ವಾದಿಸಿದ. ಹೀಗೆ ಪರಂಪರಾಗತ ಮೌಲ್ಯಗಳ ವ್ಯವಸ್ಥೆಯನ್ನೇ ಆತ ತಲೆಕೆಳಗಾಗಿಸಿದ. ಇನ್ನೊಂದು ವಿಷಯ. ಈ ಸಂದರ್ಭದಲ್ಲಿ ಮನಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಸೃಷ್ಟಿಯಾಗಿದ್ದ ಅಗೌರವದ ಸಂಸ್ಕೃತಿಗೆ ಇನ್ನಷ್ಟು ತುಪ್ಪ ಸುರಿದ. ಇಲ್ಲಿಯ ತನಕ ಸಮಾಜಗಳು ಮುಚ್ಚಿಟ್ಟಿದ ಕಾಮ ಹಾಗೂ ಲೈಂಗಿಕತೆಯ ವಿಷಯಗಳನ್ನು ಆತ ಬಟಾಬಯಲಿಗೆ ತಂದ.

ಫ್ರಾಯ್ಡ್ ಹೇಳಿದ. ಏನೆಂದರೆ ಸೆಕ್ಸ್ ಮನುಷ್ಯನೊಳಗೆ ಉರಿಯುತ್ತಲೇ ಇರುವ ಬೆಂಕಿ. ಅದನ್ನು ನಂದಿಸಲಾಗದು.







ಮುಚ್ಚಿಡಲಾಗದು. ಸೆಕ್ಸ್ ವಿಚಾರದಲ್ಲಿ ಮನುಷ್ಯ ಬೇರೆ ಎಲ್ಲ ಪ್ರಾಣಿಗಳಂತ ಹುದೇ ಆದ ಒಂದು ಪ್ರಾಣಿ. ತಂದೆ ಮಗಳನ್ನು ತುಸು ಹೆಚ್ಚಾಗಿ ಪ್ರೀತಿಸುವುದು, ತಾಯಿ ಮಗನನ್ನು ತುಸು ಹೆಚ್ಚಾಗಿ ಪ್ರೀತಿಸುವುದರ ಹಿಂದೆಯೂ ಕಾಮವಿದೆ ಎಂದು ಆತ ಹೇಳಿದ. ಹ್ಯಾಮ್ಲೆಟ್ ರಾಜಕುಮಾರನ ಮನಸ್ಸಿನಲ್ಲಿ ಮದರ್ ಕಾಂಪ್ಲೆಕ್ಸ್ (ತನ್ನದೇ ತಾಯಿಯ ಕುರಿತಾದ ಲೈಂಗಿಕ ಆಕರ್ಷಣೆ) ಇದೆ ಎಂದು ಹೇಳಿದ. ಫ್ರಾಯ್ಡ್‌ನ ವಾದಗಳು ಪಾಶ್ಚಿಮಾತ್ಯ ಜಗತ್ತಿನ ಮೇಲೆ ಎಂತಹ (ಕೆಟ್ಟ) ಪ್ರಭಾವ ಬೀರಿದವೆಂದರೆ ಈಗ ಯುರೋಪ್ ಇಲ್ಲಿಯ ತನಕ ತಾನು ಕಾದುಕೊಂಡು ಬಂದಿದ್ದ ಪರಂಪರಾಗತ ಮೌಲ್ಯಗಳನ್ನು ಕಳೆದುಕೊಂಡು ನಿಂತುಬಿಟ್ಟಿತು.

ನಾಗರಿಕತೆ ಕಳಚಿ ಬಿದ್ದುಹೋಗಿ ದೊಡ್ಡ ಲೈಂಗಿಕ ಕ್ರಾಂತಿ ಆರಂಭವಾಯಿತು. ಬದಲಾದ ಮನಸ್ಥಿತಿಯನ್ನು ಫ್ರೆಂಚ್ ಸಿಂಬಲಿಸ್ಟ್ ಕಾವ್ಯ ದಟ್ಟವಾಗಿ ನಿರೂಪಿಸುತ್ತದೆ. ಈ ಪರಂಪರೆಯ ಕವಿ ಬೌದಲೇಯರ್ ಮೌಲ್ಯಗಳನ್ನು, ಅಕ್ಕ, ತಂಗಿ, ಅಣ್ಣ, ತಮ್ಮ, ತಾಯಿ ತಂದೆ ಇಂತಹ ಸಂಬಂಧಗಳನ್ನು ಕೂಡ ಗೇಲಿ ಮಾಡುತ್ತಾನೆ. ಆತನ ಪ್ರಸಿದ್ಧ ಕೃತಿ ಫ್ಲೆವರ್ಸ್ ಆಫ್ ಸಿನ್ ಅನ್ನು ಕನ್ನಡಕ್ಕೆ ಪಿ. ಲಂಕೇಶ ಪಾಪದ ಹೂಗಳು ಹೆಸರಿನಲ್ಲಿ ಅನುವಾದಿಸಿದ್ದಾರೆ. ಈ ಕೃತಿಯಲ್ಲಿ ಬರುವ ಕವಿತೆ ಒಂದರಲ್ಲಿ ಪ್ರಿಯತಮನೊಬ್ಬ ವೇಶ್ಯೆ ಒಬ್ಬಳಿಗೆ ನೀನು ನನ್ನ ಪ್ರೇಯಸಿ ಮತ್ತು ತಂಗಿ ಎಂದು ಹೇಳುತ್ತಾನೆ.

ಅಂದರೆ ಆತನಿಗೆ ಪ್ರೇಯಸಿ, ತಂಗಿ ಮತ್ತು ವೇಶ್ಯೆಯ ನಡುವೆ ಇರುವ ವ್ಯತ್ಯಾಸವೇ ತಿಳಿದಿಲ್ಲ. ಎಲ್ಲವೂ ಒಂದೇ. ಕ್ರಮೇಣ ಇಂಗ್ಲೆಂಡ್‌ಗೂ ಪಸರಿಸಿಕೊಂಡ ಕೊಳಕು ರುಚಿ ಮತ್ತು ದೃಷ್ಟಿಕೋನದ ಸಿಂಬಲಿಸ್ಟ್ ಕಾವ್ಯ ಟಿ.ಎಸ್.ಎಲಿಯಟ್ಟನ ಕಾವ್ಯವನ್ನೂ ಪ್ರಭಾವಿಸಿತು. ಎಲಿಯಟ್‌ನ ವೇಸ್ಟ್ ಲ್ಯಾಂಡ್‌ನಲ್ಲಿ ಓರ್ವ ಪ್ರಿಯಕರ ಮತ್ತು ಪ್ರಿಯತಮೆಯ ಮಿಲನದ ಚಿತ್ರ ಬರುತ್ತದೆ. ಪ್ರಿಯಕರ ಬರುತ್ತಾನೆ.

ಮಾತಿಲ್ಲ. ಕತೆಯಿಲ್ಲ. ಅವಳ ಮೇಲೆ ನೇರ ಎರಗುತ್ತಾನೆ. ಹೊರಟುಹೋಗುತ್ತಾನೆ. ಅಂದರೆ ಪ್ರೇಮ ನಾಶವಾಗಿ ಹೋಗಿದೆ. ಇರುವುದು ಕಾಮ ಮಾತ್ರ. ಈ ಜಗತ್ತಿನಲ್ಲಿ ಅಸಹ್ಯವೇ ಸೌಂದರ್ಯವಾಗಿ ಹೋಗಿದೆ. (ಎಲಿಯಟ್‌ನಿಗೆ ಈ ಕುರಿತು ತೀವ್ರ ವಿಷಾದವಿದೆ.) ಮಾರ್ಕ್ಸ್ ಮತ್ತು ಫ್ರಾಯ್ಡ್ ಹೀಗೆ ಅಸ್ತವ್ಯಸ್ತ ಗೊಳಿಸಿಹೋದ ಯೂರೋಪಿಯನ್ ಸಮಾಜದ ಮೇಲೆ ಮತ್ತೆ ನಂತರದ ಹಲವು ಸಾಮಾಜಿಕ (ಅವಂಟ್‌ಗಾರ್ಡ್) ಚಳುವಳಿಗಳು ದಾಳಿ ನಡೆಸಿದವು. ಅವುಗಳಲ್ಲಿ ಮುಖ್ಯವಾದವು ಆಂಗ್ರಿ ಯಂಗ್ ಮ್ಯಾನ್ ಚಳುವಳಿ, ಡಾಡಾಯಿಸಂ, ಕ್ಯೂಬಿಸಂ (ಅಸಂಗತತೆಯನ್ನು ಎತ್ತಿ ಹಿಡಿಯುವ, ಸಂಸ್ಕೃತಿ ವಿರೋಧಿ ಚಳುವಳಿಗಳು). ಜತೆಯಲ್ಲಿಯೇ ಬಂದವು ಬ್ರಾ ಬರ್ನಿಂಗ್ ಚಳುವಳಿ (ಬ್ರಾ ಸುಟ್ಟು ಹಾಕುವ ಮೂಲಕ ಸಮಾನತೆಯನ್ನು ಎತ್ತಿಹಿಡಿಯಲು ಬಯಸಿದ ಚಳುವಳಿ) ಮತ್ತು ಹಿಪ್ಪಿಯಿಸಂ (ವ್ಯವಸ್ಥೆ ವಿರೋಧಿ ಮಾದಕ ದ್ರವ್ಯ ಸೇವನೆಯ ಚಳುವಳಿ) ಪ್ರಮುಖವಾದವು.

ಇಪ್ಪತ್ತನೆಯ ಶತಮಾನದ ಎರಡನೆಯ ಭಾಗದಲ್ಲಿ ಹುಟ್ಟಿಕೊಂಡ ಇಂತಹ ಚಳುವಳಿಗಳು ದೊಡ್ಡ ಪ್ರಮಾಣದಲ್ಲಿ ಯೂರೋಪಿನಲ್ಲಿ ಸಾಮಾಜಿಕ, ನೈತಿಕ ಮೌಲ್ಯಗಳ ಅಧಃಪತನಕ್ಕೆ ಕಾರಣವಾದವು. ಇವೆಲ್ಲವಕ್ಕೆ ಮತ್ತೆ ದೆಹಲಿಯಲ್ಲಿ ಕಂಡ ಹುಡುಗಿಯ ಬೈಗುಳಕ್ಕೆ ಸಂಬಂಧವಿದೆ. ಏನೆಂದರೆ ಆ ಹುಡುಗಿಯ ಮನಸ್ಸು ಸ್ವಾತಂತ್ರ್ಯದ, ಸಮಾನತೆಯ ಹೆಸರಿನಲ್ಲಿ ಪಶ್ಚಿಮದಲ್ಲಿ ಕಂಡುಬಂದ, ಇರುವ, ಒಂದು ಯುವ ವರ್ಗದ ರೀತಿಯಲ್ಲಿ ಅರಾಜಕವಾದುದು. ಅಸ್ತವ್ಯಸ್ತವಾದುದು.

ಇಂತಹ ಮತ್ತು ಇಂತಹ ಅರಾಜಕ ಮನಸ್ಸು ಹುಟ್ಟಿಕೊಂಡಿರುವ ಕಾರಣ ಅವಳು ಮತ್ತು ಅವಳಂತ ವರ ಕುಟುಂಬಗಳು ಭಾರತೀಯ ಮೌಲ್ಯಗಳನ್ನು, ಸಂಸ್ಕೃತಿಯನ್ನು ಕಳೆದುಕೊಂಡು ಕುಳಿತಿದ್ದು. ನಮ್ಮ ಸಂಸ್ಕೃತಿಗಳು ವಿಕೃತಿಯನ್ನು ಆರಾಧಿಸಿದವುಗಳಲ್ಲ. ಮತ್ತು ಅವಳು ನಮ್ಮ ಸಂಸ್ಕೃತಿಯ, ಚರಿತ್ರೆಯ ಭಾಗವಾಗಿದ್ದರೆ ಇಂತಹ ಮನಸ್ಸು ಹುಟ್ಟಿಕೊಳ್ಳುತ್ತಿರಲಿಲ್ಲ. ಇಂತಹ ಅರಾಜಕವಾದ ಮನಸ್ಸು ಯಾರಿಗೆ ಏನು ಬೇಕಾದರೂ ಮಾತನಾಡುತ್ತದೆ. ಮಾಡುತ್ತದೆ. ಹಾಗಾಗಿ ಜೆನ್ ಝೀಯ ಈ ವರ್ಗ ಅಪಾಯಕಾರಿಯಾದುದು. ಅದನ್ನು ಜೆನ್ ಝೀಯ ಒಳ್ಳೆಯ ವರ್ಗದಿಂದ ಪ್ರತ್ಯೇಕವಾಗಿ ನೋಡಬೇಕಿದೆ. ಮತ್ತು ಜೆನ್ ಝೀಯನ್ನು ನಿಭಾಯಿಸುವುದರಲ್ಲಿ ತುಂಬ ಜಟಿಲವಾದ ವಿಷಯ ಇದು.

**- ಡಾ.ಆರ್.ಜಿ.**ಹೆಗಡೆ

---

> ಆರಂಭದಲ್ಲಿ ಭಾರೀ ಮಳೆಯ ಪರಿಣಾಮವಾಗಿ ಪ್ರವಾಹ ಸಂಭವಿಸಿದೆ ಎಂದು ಕಾಣಿಸಿಕೊಂಡಿದ್ದರೂ, ನಂತರದ ಭೂವೈಜ್ಞಾನಿಕ ವಿಶ್ಲೇಷಣೆಗಳು ಹಿಮನದಿ ಪ್ರದೇಶದ ಇಳಿಜಾರು ಕುಸಿತ, ಬಂಡೆ, ಹಿಮ, ಮಣ್ಣಿನ ಭಾರೀ ಹರಿವು ಮತ್ತು ನಂತರ ಉಂಟಾದ ನದಿಯ ಪ್ರವಾಹ ಪರಸ್ಪರ ಸಂಬಂಧ ಹೊಂದಿರ ಬಹುದು ಎಂದು ಸೂಚಿಸಿವೆ.

## ಹಿಮಾಲಯದ ಮಡಿಲಿನ ಜಲಪ್ರಳಯ

ನೇಪಾಳ ಎಂದಾಕ್ಷಣ ನಮ್ಮ ಕಣ್ಣ ಮುಂದೆ ಬರುವುದು ಹಿಮಾಲಯದ ಭವ್ಯ ಪರ್ವತಗಳು, ಎವರೆಸ್ಟ್ ಶಿಖರ, ಹಿಮನದಿಗಳು, ಹಸಿರು ಕಣಿವೆಗಳು ಮತ್ತು ಪರ್ವತಗಳ ನಡುವೆ ಹರಿಯುವ ನದಿಗಳು. ಆದರೆ ಇದೇ ನೈಸರ್ಗಿಕ ಸೌಂದರ್ಯ ನೇಪಾಳವನ್ನು ವಿಶ್ವದ ಅತ್ಯಂತ ನೈಸರ್ಗಿಕ ವಿಕೋಪಗಳಿಗೆ ಒಳಗಾಗುವ ದೇಶಗಳಲ್ಲೊಂದನ್ನಾಗಿ ಮಾಡಿದೆ. ಭೂಕಂಪ, ಭೂಕುಸಿತ, ಹಿಮಕುಸಿತ, ಹಿಮನದಿ ಸರೋವರಗಳ ಒಡೆತ, ಅತಿವೃಷ್ಟಿ ಮತ್ತು ಹಠಾತ್ ಪ್ರವಾಹಗಳು ನೇಪಾಳದ ಭೌಗೋಳಿಕ ವಾಸ್ತವದ ಭಾಗವಾಗಿವೆ. ಇತ್ತೀಚೆಗೆ ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹ ಮತ್ತು ಅದಕ್ಕೆ ಸಂಬಂಧಿಸಿದ ಭೂಕುಸಿತ-ಅವಶೇಷಗಳ ಹರಿವು ಮತ್ತೊಮ್ಮೆ ಒಂದು ಗಂಭೀರ ಪ್ರಶ್ನೆಯನ್ನು ಜಗತ್ತಿನ ಮುಂದೆ ಇಟ್ಟಿದೆ. ಇದು ಕೇವಲ ಪ್ರಕೃತಿಯ ವಿಕೋಪವೇ? ಅಥವಾ ಸೂಕ್ಷ್ಮವಾದ ಹಿಮಾಲಯದ ಭೂಪ್ರದೇಶದಲ್ಲಿ ವೇಗವಾಗಿ ನಡೆಯುತ್ತಿರುವ ಮೂಲಸೌಕರ್ಯ ಅಭಿವೃದ್ಧಿಯೇ?

2026ರ ಆಗಸ್ಟ್ 26ರಂದು ರಾಸುವಾ ಜಿಲ್ಲೆ ಮತ್ತು ಚೀನಾ ಗಡಿಯ ಸಮೀಪದ ಭೋಟೆ ಕೋಶಿ-ಲ್ವೆಂಡೆ ಖೋಲಾ ಪ್ರದೇಶದಲ್ಲಿ ಸಂಭವಿಸಿದ ದುರಂತವು ಈ ಪ್ರಶ್ನೆಯನ್ನು ಇನ್ನಷ್ಟು ಗಂಭೀರ ಗೊಳಿಸಿದೆ. ಆರಂಭದಲ್ಲಿ ಭಾರೀ ಮಳೆಯ ಪರಿಣಾಮವಾಗಿ ಪ್ರವಾಹ ಸಂಭವಿಸಿದೆ ಎಂದು ಕಾಣಿಸಿಕೊಂಡಿದ್ದರೂ, ನಂತರದ ಭೂವೈಜ್ಞಾನಿಕ ವಿಶ್ಲೇಷಣೆಗಳು ಹಿಮನದಿ ಪ್ರದೇಶದ ಇಳಿಜಾರು ಕುಸಿತ, ಬಂಡೆ, ಹಿಮ, ಮಣ್ಣಿನ ಭಾರೀ ಹರಿವು ಮತ್ತು ನಂತರ ಉಂಟಾದ ನದಿಯ ಪ್ರವಾಹ ಪರಸ್ಪರ ಸಂಬಂಧ ಹೊಂದಿರಬಹುದು ಎಂದು ಸೂಚಿಸಿವೆ. ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಜಿಯಾಲಜಿಕಲ್ ಸರ್ವೇ ನಡೆಸಿದ ವಿಶ್ಲೇಷಣೆಯ ಪ್ರಕಾರ, ಈ ರೀತಿಯ ಕಸ ಸುಮಾರು 100 ಕಿಲೋ ಮೀಟರ್‌ಗಳಷ್ಟು ಕೆಳಭಾಗಕ್ಕೆ ಸಾಗಿದ್ದು, ಲ್ವೆಂಡೆ ಖೋಲಾ ಮತ್ತು ತ್ರಿಶೂಲಿ ನದಿಗಳ ಕಣಿವೆಗಳಲ್ಲಿ ವ್ಯಾಪಕ ಹಾನಿ ಉಂಟುಮಾಡಿದೆ.

ಒಂದು ಕಡೆ ಪ್ರಕೃತಿಯ ಶಕ್ತಿ, ಮತ್ತೊಂದೆಡೆ ಆ ಪ್ರದೇಶಗಳಲ್ಲಿ ನಿರ್ಮಿಸಲ್ಪಟ್ಟಿದ್ದ ರಸ್ತೆ, ಸೇತುವೆ, ಜಲವಿದ್ಯುತ್ ಯೋಜನೆಗಳು ಮತ್ತು ಜನವಸತಿಗಳು, ಇವೆರಡೂ ಮುಖಾಮುಖಿಯಾದಾಗ ದುರಂತದ ಪ್ರಮಾಣ ಎಷ್ಟು ಹೆಚ್ಚಾಗಬಹುದು ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ನೇಪಾಳದ ಪ್ರವಾಹವನ್ನು ಅರ್ಥಮಾಡಿಕೊಳ್ಳಲು ಮೊದಲಿಗೆ ಅದರ ಭೂಪ್ರದೇಶವನ್ನು ಅರ್ಥ ಮಾಡಿಕೊಳ್ಳಬೇಕು. ಉತ್ತರದಲ್ಲಿ ವಿಶ್ವದ ಅತ್ಯಂತ ಎತ್ತರದ ಹಿಮಾಲಯ, ಮಧ್ಯಭಾಗದಲ್ಲಿ ತೀವ್ರ ಇಳಿಜಾರು ಹೊಂದಿರುವ ಪರ್ವತ ಪ್ರದೇಶಗಳು ಮತ್ತು ದಕ್ಷಿಣದಲ್ಲಿ ತುಲನಾತ್ಮಕವಾಗಿ ಸಮತಟ್ಟಾದ ಪ್ರದೇಶ. ಹಿಮಾಲಯದಲ್ಲಿ ಸಂಗ್ರಹವಾಗುವ ಹಿಮ ಮತ್ತು ಹಿಮನದಿಗಳ ನೀರು ಅನೇಕ ನದಿಗಳ ಮೂಲಕ ಕೆಳಭಾಗಕ್ಕೆ ಹರಿಯುತ್ತದೆ. ಪರ್ವತಗಳ ಇಳಿಜಾರು ಅತ್ಯಂತ ತೀವ್ರವಾಗಿರುವುದರಿಂದ ನೀರು ವೇಗವಾಗಿ ಕೆಳಕ್ಕೆ ಹರಿಯುತ್ತದೆ.

ಸಾಮಾನ್ಯ ಸಮತಟ್ಟಾದ ಪ್ರದೇಶದ ನದಿಯಲ್ಲಿ ನೀರು ಹರಿಯುವ ರೀತಿಯೇ ಪರ್ವತ ಪ್ರದೇಶದ ನದಿಯಲ್ಲಿ ಇರುವುದಿಲ್ಲ. ಮೇಲಿನಿಂದ ಬರುವ ನೀರಿಗೆ ಬಂಡೆಗಳು, ಮಣ್ಣು, ಮರಗಳು ಮತ್ತು ಹಿಮದ ಅವಶೇಷಗಳು ಸೇರಿಕೊಂಡಾಗ ಅದು ಸಾಮಾನ್ಯ ಪ್ರವಾಹವಾಗದೆ ಅತ್ಯಂತ ವೇಗವಾಗಿ ಚಲಿಸುತ್ತದೆ. ಈ ಹರಿವು ಕೇವಲ ನೀರನ್ನು ಹೊತ್ತೊಯ್ಯುವುದಿಲ್ಲ; ಅದರ ದಾರಿಯಲ್ಲಿರುವ ಕಲ್ಲು, ಮಣ್ಣು, ಮರ, ವಾಹನಗಳು, ಸೇತುವೆಗಳು ಮತ್ತು ಕಟ್ಟಡಗಳನ್ನೂ ತನ್ನೊಂದಿಗೆ ಎಳೆದುಕೊಂಡು ಹೋಗುವಷ್ಟು ಶಕ್ತಿಶಾಲಿಯಾಗಿರುತ್ತದೆ.

ಹಿಮಾಲಯವು ಭೌಗೋಳಿಕವಾಗಿ ಯುವ ಪರ್ವತ ಶ್ರೇಣಿ, ಭಾರತೀಯ ಮತ್ತು ಯುರೇಷಿಯನ್ ಟೆಕ್ಟೋನಿಕ್ ಫಲಕಗಳ ನಿರಂತರ ಚಲನೆಯಿಂದ ಈ ಪ್ರದೇಶ ಇಂದಿಗೂ ಸಕ್ರಿಯವಾಗಿದೆ. ಇದರ ಪರಿಣಾಮ ಅನೇಕ ಪರ್ವತ ಇಳಿಜಾರುಗಳು ಸ್ವಾಭಾವಿಕವಾಗಿಯೇ ಅಸ್ಥಿರವಾಗಿವೆ, ಮಳೆ, ಭೂಕಂಪನ, ಹಿಮ ಕರಗುವಿಕೆ ಮತ್ತು ನದಿಯ ಕೊರೆತ ಇವುಗಳು ಇಳಿಜಾರಿನ ಸ್ಥಿರತೆಯನ್ನು ಮತ್ತಷ್ಟು ದುರ್ಬಲಗೊಳಿಸಬಹುದು.

ಹೀಗಾಗಿ ನೇಪಾಳದಲ್ಲಿ ಮಳೆ ಬಂದಾಗ ಅದು ಕೇವಲ ನೆರೆ ಸಮಸ್ಯೆಯನ್ನು ಸೃಷ್ಟಿಸುವುದಿಲ್ಲ; ಕೆಲವು ಸಂದರ್ಭಗಳಲ್ಲಿ ಅದು ಭೂಕುಸಿತ, ಬಂಡೆ ಕುಸಿತಕ್ಕೆ ಕಾರಣವಾಗಬಹುದು. ಒಂದು ಅಪಾಯ ಮತ್ತೊಂದು ಅಪಾಯವನ್ನು ಹುಟ್ಟುಹಾಕುವ ಈ ಸರಪಳಿ ಪ್ರತಿಕ್ರಿಯೆ, ಹಿಮಾಲಯದ ವಿಕೋಪಗಳನ್ನು ಅತ್ಯಂತ ಅಪಾಯಕಾರಿಯಾಗಿಸುತ್ತದೆ.

ಹವಾಮಾನ ಬದಲಾವಣೆಯ ಪರಿಣಾಮ ವೂ ಈ ಚರ್ಚೆಯಲ್ಲಿ ಪ್ರಮುಖವಾಗಿದೆ. ಜಾಗತಿಕ ತಾಪಮಾನ ಏರಿಕೆಯಿಂದ ಹಿಮಾಲಯದ ಹಿಮನದಿಗಳ ಮೇಲೆ ಪರಿಣಾಮ ಬೀರುತ್ತಿದೆ. ಹಿಮನದಿಗಳು ಕುಗ್ಗುತ್ತಿರುವುದು, ಹಿಮದ ಸ್ವರೂಪದಲ್ಲಿ ಬದಲಾವಣೆ, ಮತ್ತು ಕೆಲವು ಪ್ರದೇಶಗಳಲ್ಲಿ ತೀವ್ರ ಮಳೆಯ ಪರ್ವತ ಪರಿಸರ ವ್ಯವಸ್ಥೆಯ ಸ್ಥಿರತೆಯ ಮೇಲೆ ಪರಿಣಾಮ ಬೀರುತ್ತಿವೆ. ಆದರೆ ಪ್ರತಿಯೊಂದು ಪ್ರವಾಹಕ್ಕೂ ಹವಾಮಾನ ಬದಲಾವಣೆಯನ್ನೇ ಏಕೈಕ ಕಾರಣವೆಂದು ಹೇಳುವುದು ವೈಜ್ಞಾನಿಕವಾಗಿ ಸರಿಯಾಗುವುದಿಲ್ಲ.

ನಿರ್ದಿಷ್ಟ ದುರಂತಕ್ಕೆ ಸ್ಥಳೀಯ ಮಳೆಯ ಪ್ರಮಾಣ, ಪರ್ವತದ ಭೂವೈಜ್ಞಾನಿಕ ಸ್ಥಿತಿ, ಹಿಮನದಿ ಅಥವಾ ಬಂಡೆ ಕುಸಿತ, ನದಿಯ ಹರಿವಿನ ಸ್ವರೂಪ ಮತ್ತು ಮಾನವ ನಿರ್ಮಾಣಗಳ ಸ್ಥಳ ಹಾಗೂ ವಿನ್ಯಾಸ, ಇವೆಲ್ಲವನ್ನೂ ಒಟ್ಟಾಗಿ ಪರಿಗಣಿಸಬೇಕು. ನೇಪಾಳದ ಇತ್ತೀಚಿನ ದುರಂತವೂ ಇದೇ ರೀತಿಯ ಬಹುಕಾರಕ ವಿಕೋಪವೆಂದು ನೋಡಬೇಕಾಗಿದೆ.

ಪ್ರಕೃತಿಯ ಅಪಾಯವನ್ನು ದುರಂತವನ್ನಾಗಿ ಪರಿವರ್ತಿಸುವಲ್ಲಿ ಮಾನವ ಚಟುವಟಿಕೆಗಳ ಪಾತ್ರವನ್ನು ಕಡೆಗಣಿಸಲಾಗುವುದಿಲ್ಲ. ಕಳೆದ ಕೆಲವು ದಶಕಗಳಲ್ಲಿ ನೇಪಾಳದಲ್ಲಿ ರಸ್ತೆ, ಸೇತುವೆ, ಜಲವಿದ್ಯುತ್ ಯೋಜನೆ, ವಿದ್ಯುತ್ ಪ್ರಸರಣ ಮಾರ್ಗ, ಪ್ರವಾಸೋದ್ಯಮ ಮೂಲಸೌಕರ್ಯ ಮತ್ತು ಗಡಿ ಸಂಪರ್ಕ ವ್ಯವಸ್ಥೆಗಳ ಅಭಿವೃದ್ಧಿ ವೇಗ ಪಡೆದುಕೊಂಡಿದೆ. ಈ ಅಭಿವೃದ್ಧಿ ನೇಪಾಳದ ಆರ್ಥಿಕ ಪ್ರಗತಿಗೆ ಅತ್ಯಂತ ಅಗತ್ಯವಾದದ್ದು. ಪರ್ವತ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಆಸ್ಪತ್ರೆ, ಶಾಲೆ, ಮಾರುಕಟ್ಟೆ, ಉದ್ಯೋಗ ಮತ್ತು ಇತರ ಸೇವೆಗಳನ್ನು ತಲುಪಿಸಲು ರಸ್ತೆ ಸಂಪರ್ಕ ಅನಿವಾರ್ಯ. ಆದರೆ ಸಮಸ್ಯೆ ಏನೆಂದರೆ, ಪರ್ವತ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಮಾಡಲು ನದಿಯ ಕಣಿವೆಗಳು ಮತ್ತು ಪರ್ವತದ ಇಳಿಜಾರುಗಳನ್ನೇ ಬಳಸಬೇಕಾಗುತ್ತದೆ. ಹೀಗಾಗಿ ನದಿ ಮತ್ತು ರಸ್ತೆ ಒಂದೇ ಕಣಿವೆಯನ್ನು ಹಂಚಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಜಲವಿದ್ಯುತ್ ಕ್ಷೇತ್ರವು ನೇಪಾಳದ ಅಭಿವೃದ್ಧಿಯ ಅತ್ಯಂತ ಪ್ರಮುಖ ಭಾಗವಾಗಿದೆ. ಹಿಮಾಲಯದಿಂದ ಹರಿಯುವ ನದಿಗಳಿಂದ ಅಪಾರ ಪ್ರಮಾಣದ ಜಲವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ನೇಪಾಳಕ್ಕಿದೆ. ವಿದ್ಯುತ್ ಉತ್ಪಾದನೆ ಹೆಚ್ಚಿಸುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಮಾತ್ರವಲ್ಲ, ಕೈಗಾರಿಕೆ ಮತ್ತು ಗಡಿ ವ್ಯಾಪಾರಕ್ಕೂ ಮುಖ್ಯವಾಗಿದೆ. ಆದರೆ ಜಲವಿದ್ಯುತ್ ಯೋಜನೆಗಳ ಬಹುಪಾಲು ನದಿಗಳ ಸಮೀಪವೇ ನಿರ್ಮಾಣವಾಗಬೇಕಾಗುತ್ತದೆ ಮತ್ತು ಇತರ ಮೂಲಸೌಕರ್ಯಗಳು ನದಿ ಕಣಿವೆಗಳ ನಿರ್ಮಾಣಗೊಳ್ಳುತ್ತವೆ.



ಇತ್ತೀಚಿನ ದುರಂತದಲ್ಲಿ ತ್ರಿಶೂಲಿ ಕಣಿವೆಯಲ್ಲಿರುವ ಹಲವು ಜಲವಿದ್ಯುತ್ ಯೋಜನೆಗಳು ಹಾನಿಗೊಳಗಾಗಿವೆ. ರಾಯಿಟರ್ಸ್ ವರದಿಗಳ ಪ್ರಕಾರ, ನೂರಾರು ಜನರು ಜಲವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಸಿಲುಕಿಕೊಂಡಿರುವ ಆತಂಕ ವ್ಯಕ್ತವಾಗಿದೆ. ಕೆಲವು ಯೋಜನೆಗಳು ಪ್ರವಾಹದಿಂದ ಹಾನಿಗೊಳಗಾಗಿದ್ದು, ವಿದ್ಯುತ್ ಉತ್ಪಾದನೆಯ ಮೇಲೂ ಪರಿಣಾಮ ಬೀರಿದೆ.

ಇಲ್ಲಿ ಪ್ರಶ್ನೆ ಜಲವಿದ್ಯುತ್ ಯೋಜನೆಗಳನ್ನು ನಿರ್ಮಿಸಬೇಕೇ ಬೇಡವೇ ಎಂಬುದಲ್ಲ, ಅವುಗಳನ್ನು ಎಲ್ಲಿ ನಿರ್ಮಿಸಬೇಕು ಮತ್ತು ಯಾವ ಮಟ್ಟದ ಅಪಾಯವನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸ ಗೊಳಿಸಬೇಕು ಎಂಬುದು. ನೂರು ವರ್ಷಕ್ಕೊಮ್ಮೆ ಸಂಭವಿಸಬಹುದಾದ ಪ್ರವಾಹದ ಪ್ರಮಾಣವನ್ನು ಪರಿಗಣಿಸದೆ ನಿರ್ಮಿಸಿದ ಯೋಜನೆ ಭವಿಷ್ಯದಲ್ಲಿ ದೊಡ್ಡ ಅಪಾಯವಾಗಬಹುದು.

ನೇಪಾಳದ ಉತ್ತರ ಭಾಗದ ಗಡಿ ಪ್ರದೇಶಗಳಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ಮತ್ತೊಂದು ಆಯಾಮವಿದೆ. ಟಿಬೆಟ್ ಪ್ರದೇಶದೊಂದಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮತ್ತು ಸೇತುವೆಗಳು ವ್ಯಾಪಾರ, ಪ್ರವಾಸೋದ್ಯಮ ಮತ್ತು ತಾಂತ್ರಿಕ ದೃಷ್ಟಿಯಿಂದ ಮಹತ್ವದ್ದಾಗಿವೆ.

ರಾಸುವಾ ಪ್ರದೇಶ, ಈ ಕಾರಣದಿಂದ ಅತ್ಯಂತ ಪ್ರಮುಖವಾಗಿದೆ. ಆದರೆ ಗಡಿ ಸಂಪರ್ಕಕ್ಕಾಗಿ ನಿರ್ಮಿಸಲಾಗುವ ಮೂಲಸೌಕರ್ಯವೂ ಪರ್ವತದ ಸೂಕ್ಷ್ಮ ಪರಿಸರ ವ್ಯವಸ್ಥೆಯೊಳಗೇ ಬರುತ್ತದೆ, ಹೀಗಾಗಿ ಅಭಿವೃದ್ಧಿಯ ವೇಗ ಮತ್ತು ಭೌಗೋಳಿಕ ಸಾಮರ್ಥ್ಯದ ನಡುವೆ ಸಮತೋಲನ ಅತ್ಯಗತ್ಯ. ಒಂದು ಪ್ರಮುಖ ಸೇತುವೆ ಕೊಚ್ಚಿಹೋದರೆ ಕೇವಲ ಒಂದು ಗ್ರಾಮ ಮಾತ್ರ ಸಂಪರ್ಕ ಕಳೆದು ಕೊಳ್ಳುವುದಿಲ್ಲ; ಸಂಪೂರ್ಣ ಪ್ರದೇಶದ ಆರ್ಥಿಕ ಚಟುವಟಿಕೆ, ಸರಕು ಸಾಗಣೆ ಮತ್ತು ತುರ್ತು ರಕ್ಷಣಾ ಕಾರ್ಯಾಚರಣೆಗಳ ಮೇಲೂ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ನೇಪಾಳದ ದುರಂತ ನಮಗೆ ಒಂದು ಪ್ರಮುಖ ವ್ಯತ್ಯಾಸವನ್ನು ಕಲಿಸುತ್ತದೆ.

ಪರ್ವತ ಪ್ರದೇಶದಲ್ಲಿ ಅಭಿವೃದ್ಧಿ ಮಾಡಬಾರದು ಎಂಬುದು ಪರಿಹಾರವಲ್ಲ, ಅಪಾಯವನ್ನು ಅರ್ಥಮಾಡಿಕೊಂಡು ಅಭಿವೃದ್ಧಿ ಮಾಡಬೇಕು ಎಂಬುದೇ ಸರಿಯಾದ ಮಾರ್ಗ. ಒಂದು ಯೋಜನೆ ನಿರ್ಮಿಸುವ ಮೊದಲು ಅದರ ಆರ್ಥಿಕ ಲಾಭವನ್ನು ಮಾತ್ರ ಲೆಕ್ಕ ಹಾಕದೆ, ಅದು ಪ್ರವಾಹ, ಭೂಕುಸಿತ ಅಥವಾ ಹಿಮನದಿ ಸಂಬಂಧಿತ ದುರಂತ ಎದುರಿಸಿದಾಗ ಏನಾಗಬಹುದು ಎಂಬುದನ್ನೂ ಲೆಕ್ಕ ಹಾಕಬೇಕು.

ಒಂದು ಸೇತುವೆ ಕುಸಿದರೆ ಪರ್ಯಾಯ ಮಾರ್ಗವಿದೆಯೇ? ವಿದ್ಯುತ್ ಯೋಜನೆಯ ಪ್ರವೇಶ ರಸ್ತೆ ಕೊಚ್ಚಿಹೋದರೆ ರಕ್ಷಣಾ ತಂಡಗಳು ಹೇಗೆ ತಲುಪುತ್ತವೆ? ಭಾರೀ ಡೆಬ್ರಿಸ್ ಹರಿದು ಬಂದರೆ ಯಾವ ಪ್ರದೇಶಗಳನ್ನು ತಕ್ಷಣ ಖಾಲಿ ಮಾಡಬೇಕು? ಇಂತಹ ಪ್ರಶ್ನೆಗಳಿಗೆ ಯೋಜನೆ ರೂಪಿಸುವ ಹಂತದ ಉತ್ತರ ಸಿದ್ಧವಾಗಿರಬೇಕು. ಪ್ರಕೃತಿಯನ್ನು ಸೋಲಿಸುವ ಅಭಿವೃದ್ಧಿ ಶಾಶ್ವತವಲ್ಲ, ಪ್ರಕೃತಿಯ ನಿಯಮಗಳನ್ನು ಅರ್ಥಮಾಡಿಕೊಂಡು ನಡೆಯುವ ಅಭಿವೃದ್ಧಿಯೇ ನಿಜವಾದ ಪ್ರಗತಿ, ಇದು ನೇಪಾಳದ ಜಲಪ್ರಳಯದ ಅತ್ಯಂತ ದೊಡ್ಡ ಪಾಠ.

**- ಮೋಹನ್** ವಿಶ್ವ

---

## ಸ್ನಾನ ಮಾಡುವುದು ಹೇಗೆ?

ಸಂಪಾದಕರ ಸದ್ಯಶೋಧನೆ

ಸ್ನಾನ ಮಾಡುವುದು ನಮ್ಮ ದೈನಂದಿನ ಜೀವನದ ಅತ್ಯಂತ ಸಾಮಾನ್ಯ ಹಾಗೂ ಸಹಜ ಕ್ರಿಯೆ. ದಿನದ ಆರಂಭದಲ್ಲಿ ಲವಲವಿಕೆ ಪಡೆಯಲು ಅಥವಾ ದಿನದ ಕೊನೆಯಲ್ಲಿ ದಣಿವು ನೀಗಿಸಿಕೊಳ್ಳಲು ಪ್ರತಿಯೊಬ್ಬರೂ ಸ್ನಾನವನ್ನು ಆಶ್ರಯಿಸುತ್ತಾರೆ. ಇದು ಕೇವಲ ದೇಹವನ್ನು ಸ್ವಚ್ಛಗೊಳಿಸುವ ಪ್ರಕ್ರಿಯೆಯಷ್ಟೇ ಅಲ್ಲ, ಮನಸ್ಸಿಗೆ ನೆಮ್ಮದಿ ನೀಡುವ ಒಂದು ಅಭ್ಯಾಸವೂ ಹೌದು. ಆದರೆ ಮೇಲ್ನೋಟಕ್ಕೆ ಅತ್ಯಂತ ಸರಳವೆಂದು ತೋರುವ ಈ ದಿನಚರಿಯಲ್ಲಿ ಬಹುತೇಕ ಜನರು ತಿಳಿಯದೇ ಹಲವು ತಪ್ಪುಗಳನ್ನು ಮಾಡುತ್ತಾರೆ.

ವೈಯಕ್ತಿಕ ನೈರ್ಮಲ್ಯದ ಭಾಗವಾಗಿರುವ ಈ ಸಣ್ಣ ತಪ್ಪುಗಳು ದೀರ್ಘಾವಧಿಯಲ್ಲಿ ನಮ್ಮ ಚರ್ಮ, ಕೂದಲು ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಬೀರಬಹುದು. ಸ್ನಾನ ಮಾಡುವಾಗ ಜನರು ಮಾಡುವ ಅತಿ ದೊಡ್ಡ ತಪ್ಪು ಎಂದರೆ ಅತಿಯಾದ ಬಿಸಿ ನೀರನ್ನು ಬಳಸುವುದು. ಸುಡುವ ಬಿಸಿ ನೀರಿನಲ್ಲಿ ಸ್ನಾನ ಮಾಡುವುದು ಆ ಕ್ಷಣಕ್ಕೆ ಆರಾಮದಾಯಕ ಹಾಗೂ ಹಿತಕರ ಎನಿಸಬಹುದು. ಆದರೆ ಇದು ಚರ್ಮದ ಮೇಲ್ಮೈಯಲ್ಲಿರುವ ನೈಸರ್ಗಿಕ ತೈಲಗಳನ್ನು (ಲಿಪಿಡ್‌ಗಳು) ಸಂಪೂರ್ಣವಾಗಿ ಕಸಿದುಕೊಳ್ಳುತ್ತದೆ. ಇದರಿಂದಾಗಿ ಚರ್ಮವು ತೀವ್ರವಾಗಿ ಒಣಗುವುದು, ತುರಿಕೆ ಉಂಟಾಗುವುದು ಮತ್ತು ಸೂಕ್ಷ್ಮ ರಂಧ್ರಗಳು ಹಾನಿಗೊಳಗಾಗುವುದು ಸಾಮಾನ್ಯವಾಗುತ್ತದೆ. ಎಕ್ಸಿಮಾ ಅಥವಾ ಸೋರಿಯಾಸಿಸ್‌ನಂಥ ಚರ್ಮದ ಕಾಯಿಲೆ ಇರುವವರಲ್ಲಿ ಬಿಸಿ ನೀರು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಆದ್ದರಿಂದ ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳಲು ಯಾವಾಗಲೂ ಉಗುರುಬೆಚ್ಚಗಿನ ನೀರನ್ನು ಮಾತ್ರ ಬಳಸುವುದು ಸೂಕ್ತ. ಸ್ನಾನದ ಅವಧಿಯು ಸಹ ಬಹಳ ಮುಖ್ಯ. ಅನೇಕರು ಬಾತ್ ರೂಮ್‌ನಲ್ಲಿ 20 ರಿಂದ 30 ನಿಮಿಷಗಳಿಗೂ ಹೆಚ್ಚು ಕಾಲ ಕಾಲ ಕಳೆಯುತ್ತಾರೆ. ಅತಿಯಾದ ಸಮಯ ನೀರಿನ ಸಂಪರ್ಕದಲ್ಲಿ ಇರುವುದರಿಂದ ಚರ್ಮದ ರಕ್ಷಣಾತ್ಮಕ ಪದರವು ಮೃದುವಾಗಿ ಹಾಳಾಗುತ್ತದೆ. ಇದರಿಂದ ಚರ್ಮದಲ್ಲಿರುವ ನೈಸರ್ಗಿಕ ಆರ್ದ್ರತೆ ಆವಿಯಾಗಿ, ಕಳೆಗುಂದಿದಂತಾಗುತ್ತದೆ. ಚರ್ಮ ರೋಗ ತಜ್ಞರ ಪ್ರಕಾರ, ಸ್ನಾನದ ಅವಧಿಯು ಐದರಿಂದ ಹತ್ತು ನಿಮಿಷಗಳಿಗೆ ಸೀಮಿತವಾಗಿರಬೇಕು. ಕಡಿಮೆ ಸಮಯದಲ್ಲಿ ಪರಿಣಾಮಕಾರಿಯಾಗಿ ಸ್ನಾನ ಮುಗಿಸುವುದರಿಂದ ಚರ್ಮದ ಆರೋಗ್ಯವೂ ಉಳಿಯುತ್ತದೆ ಮತ್ತು ನೀರಿನ ಪೋಲಾಗುವಿಕೆಯನ್ನೂ ತಡೆಯಬಹುದು.

ಅತಿಯಾದ ಪರಿಮಳ ಅಥವಾ ಕಠಿಣ ರಾಸಾಯನಿಕಗಳನ್ನು ಹೊಂದಿರುವ ಸಾಬೂನುಗಳ ಬಳಕೆಯೂ ತಪ್ಪು. ಅಂಗಡಿಗಳಲ್ಲಿ ಸಿಗುವ ಆಕರ್ಷಕ ಸುಗಂಧದ ಸೋಪುಗಳು ಮತ್ತು ಆಂಟಿ ಬ್ಯಾಕ್ಟೀರಿಯಲ್ ಸಾಬೂನುಗಳು ದೇಹಕ್ಕೆ ಒಳ್ಳೆಯದು ಎಂದು ಹಲವರು ನಂಬುತ್ತಾರೆ. ಆದರೆ ಇವುಗಳಲ್ಲಿರುವ ಕೃತಕ ರಾಸಾಯನಿಕಗಳು ಮತ್ತು ಸಲ್ಫೇಟ್‌ಗಳು ಚರ್ಮದ ನೈಸರ್ಗಿಕ ರಕ್ಷಣಾ ಕವಚವನ್ನು ನಾಶಮಾಡುತ್ತವೆ.

ಅಲ್ಲದೇ, ದೇಹಕ್ಕೆ ಪ್ರಯೋಜನಕಾರಿಯಾದ ಉಪಯುಕ್ತ ಬ್ಯಾಕ್ಟೀರಿಯಾಗಳನ್ನು ಕೂಡ ಇವು ಕೊಲ್ಲುತ್ತವೆ. ಇದರಿಂದ ಚರ್ಮದಲ್ಲಿ ತುರಿಕೆ, ಅಲರ್ಜಿ ಉಂಟಾಗಬಹುದು. ಆದ್ದರಿಂದ ಮೃದುವಾದ, ರಾಸಾಯನಿಕ ರಹಿತ, ಚರ್ಮಕ್ಕೆ ಹೊಂದಿಕೊಳ್ಳುವ ನೈಸರ್ಗಿಕ ಬಾಡಿ ವಾಶ್ ಅಥವಾ ಸೋಪುಗಳನ್ನು ಬಳಸುವುದು ಅತ್ಯಗತ್ಯ. ಸ್ನಾನದ ಸ್ಪಾಂಜ್ (ಲೂಫಾ) ಅಥವಾ ಸ್ಕ್ರಬ್ಬರ್‌ಗಳ ಅತಿಯಾದ ಮತ್ತು ತಪ್ಪು ಬಳಕೆಯೂ ಮಾರಕವಾಗಬಲ್ಲುದು. ಚರ್ಮದಲ್ಲಿರುವ ಕೊಳೆಯನ್ನು ತೆಗೆಯಲು ಲೂಫಾ ಬಳಸಿ ಬಲವಾಗಿ ಉಜ್ಜುವುದು ಹಲವರ ಅಭ್ಯಾಸ. ಆದರೆ ಚರ್ಮವನ್ನು ಅತಿಯಾಗಿ ಉಜ್ಜುವುದರಿಂದ ಅದರ ಮೇಲ್ಪದರ ಸುಲಿದು ಹೋಗಿ ಸಣ್ಣ ಗಾಯಗಳು ಮತ್ತು ಸೋಂಕು ಉಂಟಾಗಬಹುದು. ಇದಕ್ಕಿಂತ ಹೆಚ್ಚಾಗಿ, ಸ್ನಾನದ ಕೋಣೆಯಲ್ಲಿ ತೇವಾಂಶ ಹೆಚ್ಚಾಗಿರುವುದರಿಂದ ಲೂಫಾಗಳ ಒಳಗೆ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳು (ಫಂಗಸ್) ಅತ್ಯಂತ ವೇಗವಾಗಿ ಬೆಳೆಯುತ್ತವೆ. ತಿಂಗಳುಗಟ್ಟಲೆ ಬದಲಾಯಿಸದ ಲೂಫಾವನ್ನು ದೇಹಕ್ಕೆ ಉಜ್ಜಿಕೊಳ್ಳುವುದರಿಂದ ಗಂಭೀರ ಚರ್ಮದ ಸೋಂಕುಗಳು ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಲೂಫಾವನ್ನು ಸೌಮ್ಯವಾಗಿ ಬಳಸಬೇಕು ಮತ್ತು ಪ್ರತಿ ಕೆಲವು ವಾರಗಳಿಗೊಮ್ಮೆ ಬದಲಾಯಿಸಬೇಕು.



ಕೂದಲು ತೊಳೆಯುವ ವಿಧಾನವೂ ಬಹಳ ಮುಖ್ಯ. ಪ್ರತಿದಿನ ಕೂದಲಿಗೆ ಶಾಂಪೂ ಹಾಕಿ ತೊಳೆಯುವುದು ಕೂದಲಿನ ಆರೋಗ್ಯಕ್ಕೆ ಒಳ್ಳೆಯದಲ್ಲ. ದಿನವೂ ಶಾಂಪೂ ಬಳಸುವುದರಿಂದ ನೆತ್ತಿಯಲ್ಲಿರುವ ನೈಸರ್ಗಿಕ ತೈಲ ನಷ್ಟವಾಗಿ ಕೂದಲು ಒಣಗುವುದು, ತುಂಡಾಗುವುದು ಮತ್ತು ತಲೆಹೊಟ್ಟು ಹೆಚ್ಚಾಗುವುದು ಕಂಡು ಬರುತ್ತದೆ. ಕೂದಲಿನ ವಿಧಕ್ಕೆ ಅನುಗುಣವಾಗಿ ವಾರಕ್ಕೆ ಎರಡು ಅಥವಾ ಮೂರು ಬಾರಿ ಮಾತ್ರ ಶಾಂಪೂ ಬಳಸುವುದು ಉತ್ತಮ.

**- ವಿಶ್ವೇಶ್ವರ** ಭಟ್

## ನೆಲೆಯೂರಲು ಬರವಣಿಗೆ ಮುಖ್ಯ

» ಮೊದಲನೇ ಪುಟದಿಂದ

ಸಂಹಿತೆ, ಪ್ರತ್ಯೇಕ ಕಾನೂನು ಇಲ್ಲ, ಆದರೆ ನಮಗೆ ನಾವೇ ಕೆಲವು ಸಂಹಿತೆ ಅಳವಡಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಮಾತನಾಡಿ, ಪತ್ರಿಕೋದ್ಯಮ ಹಿಂದಿಗಿಂತ ಇಂದು ಅನೇಕ ರೀತಿಯಲ್ಲಿ ಬದಲಾಗಿದೆ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಮುದ್ರಣ ಮಾಧ್ಯಮಕ್ಕೆ ಅಪಾಯವಿದೆ ಎಂಬ ತಪ್ಪು ಕಲ್ಪನೆಯಿಂದ ಹೊರ ಬರಬೇಕು. ಗಮನ ಸೆಳೆಯುವ, ಜನರಿಗೆ ಅನುಕೂಲವಾಗುವ ಸುದ್ದಿಯನ್ನು ಬರೆದರೆ ಜನರು ದುಡ್ಡು ಕೊಟ್ಟು ಪತ್ರಿಕೆ ಖರೀದಿಸುತ್ತಾರೆಂದರು.

ಸಾಂಸ್ಕೃತಿಕ ಸಮಿತಿಯ ಸಂಚಾಲಕ ಚಲಂ ಹಾಡ್ಲಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಿಸಿದರು. ಸಂಘದ ಉಪಾಧ್ಯಕ್ಷ ಎನ್.ನಂಜುಂಡೇಗೌಡ, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ.ಹರೀಶ್, ಖಜಾಂಚಿ ಪ್ರಕಾಶ್ ಬೆಳವಾಡಿ, ರೇಷ್ಮೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಅಣ್ಣಾಜಿ ರಾವ್ ಇದ್ದರು. ಸಮಿತಿಯ ಮಲ್ಲಿಕಾರ್ಜುನ್ ಕೊಚ್ಚರಗಿ ನಿರೂಪಿಸಿದರು. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಅವರು ವಂದಿಸಿದರು.

# ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರ ಸೇವೆಗೆ ಬೆಲೆ ಕಟ್ಟಲಾಗದು

### ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆಯಲ್ಲಿ ಶಾಸಕ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಸಾಧಕನ ಹಿಂದೆ ಆತನಿಗೆ ವಿದ್ಯೆ, ಸಂಸ್ಕಾರ ಹಾಗೂ ಮಾರ್ಗದರ್ಶನ ನೀಡಿದ ಶಿಕ್ಷಕರ ಕೊಡುಗೆ ಜೊತೆಗೆ ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ನಗರದ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಗುರುಗಳಿಗೆ ಅತ್ಯಂತ ಪೂಜ್ಯನೀಯ ಸ್ಥಾನ ನೀಡಲಾಗಿದೆ. ಗುರುಗಳನ್ನು ದೇವರ ಸಮಾನವಾಗಿ ಕಾಣುವ ಪರಂಪರೆ ನಮ್ಮದು. ವ್ಯಕ್ತಿತ್ವ ನಿರ್ಮಾಣದಿಂದ ಹಿಡಿದು ದೇಶದ ಭವಿಷ್ಯ ರೂಪಿಸುವವರೆಗೂ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಶಿಕ್ಷಕರು ಮಕ್ಕಳ ಭವಿಷ್ಯದ ಶಿಲ್ಪಿಗಳಾಗಿದ್ದು, ಶಾಲೆಗೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ತಮ್ಮ ಸ್ವಂತ ಮಕ್ಕಳಂತೆ ಕಾಣುವ ಮನೋಭಾವ ಹೊಂದಿದ್ದಾರೆ. ಪಠ್ಯಪುಸ್ತಕದ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ, ಸಂಸ್ಕೃತಿ, ಶಿಸ್ತು ಹಾಗೂ ಮಾನವೀಯ ಮೌಲ್ಯಗಳನ್ನು ಕಲಿಸುವ ಮೂಲಕ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಮಹತ್ತರ ಜವಾಬ್ದಾರಿಯನ್ನು ಶಿಕ್ಷಕರು ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಂದೆ-ತಾಯಿ ಮಕ್ಕಳಿಗೆ ಜೀವನದ ಮೊದಲ ಪಾಠ ಕಲಿಸಿದರೆ, ಶಿಕ್ಷಕರು ಅವರ ವ್ಯಕ್ತಿತ್ವಕ್ಕೆ ಸ್ಪಷ್ಟ ರೂಪ ನೀಡುತ್ತಾರೆ. ವಿದ್ಯಾರ್ಥಿಗಳು ಭವಿಷ್ಯದಲ್ಲಿ ಯಾವ ದಾರಿಯಲ್ಲಿ ಸಾಗಬೇಕು ಹಾಗೂ ಸಮಾಜಕ್ಕೆ ಹೇಗೆ ಕೊಡುಗೆ ನೀಡಬೇಕು ಎಂಬುದಕ್ಕೆ ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡುತ್ತಾರೆ. ಹೀಗಾಗಿ ಶಿಕ್ಷಕ ವೃತ್ತಿ ಕೇವಲ ಉದ್ಯೋಗವಲ್ಲ; ಅದು ಭವಿಷ್ಯದ ಪೀಳಿಗೆಯನ್ನು ನಿರ್ಮಿಸುವ ಪವಿತ್ರ ಜವಾಬ್ದಾರಿ ಎಂದು ಹೇಳಿದರು.

ಸಕಲೇಶಪುರ ಹಾಗೂ ಆಲೂರು ತಾಲೂಕುಗಳ ಶೈಕ್ಷಣಿಕ ಸಾಧನೆಯಲ್ಲಿ ಶಿಕ್ಷಕರ ಪರಿಶ್ರಮ ಪ್ರಮುಖವಾಗಿದೆ. ಸಮಸ್ಯೆಗಳ ನಡುವೆಯೂ ವಿದ್ಯಾರ್ಥಿಗಳ ಮೇಲೆ ಕಾಳಜಿ ವಹಿಸಿ ಉತ್ತಮ



ಬೋಧನೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಶಿಕ್ಷಕರಿಂದಲೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಈ ಭಾಗದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಸಾಧಿಸುತ್ತಿದ್ದಾರೆ. ಇದರ ನಿಜವಾದ ಶ್ರೇಯಸ್ಸು ಶಿಕ್ಷಕರಿಗೆ ಸಲ್ಲಬೇಕು ಎಂದು ಸಿಮೆಂಟ್ ಮಂಜು ಶ್ಲಾಘಿಸಿದರು.

ಮಾಜಿ ಸಚಿವ ಕುಮಾರಸ್ವಾಮಿ ಮಾತನಾಡಿ, ರಾಜ್ಯ, ಜಿಲ್ಲೆ ಹಾಗೂ ಮಲೆನಾಡು ಭಾಗದ ಮಟ್ಟದಲ್ಲಿ ಸಕಲೇಶಪುರ ಮತ್ತು ಆಲೂರು ತಾಲೂಕುಗಳ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನೀಡುತ್ತಿರುವುದು ಸಂತಸದ ಸಂಗತಿ. ಈ ಭಾಗದಲ್ಲಿ ಹಲವು ಸಮಸ್ಯೆಗಳಿದ್ದರೂ ಶಿಕ್ಷಕರು ಮಕ್ಕಳನ್ನು ಪ್ರೀತಿಯಿಂದ ನೋಡಿಕೊಂಡು ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದರು.

ಶಿಕ್ಷಕರ ಪರಿಶ್ರಮ ಹಾಗೂ ಶಿಕ್ಷಣ ಕ್ಷೇತ್ರದ ಸಾಧನೆಗೆ ಎಲ್ಲರೂ ಪ್ರೋತ್ಸಾಹ ನೀಡಬೇಕು. ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದೊಂದಿಗೆ ತಮಗೆ ಆತ್ಮೀಯ ಸಂಬಂಧವಿದ್ದು, ತಾವು ಕೂಡ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವುದರಿಂದ ಶಿಕ್ಷಕರ ಕಷ್ಟ-ಸವಾಲುಗಳ ಅರಿವಿದೆ. ಶಿಕ್ಷಕರು ತಮ್ಮಲ್ಲಿರುವ ಶಕ್ತಿಯನ್ನು ಸಮಾಜದ ಒಳಿತಿಗಾಗಿ ಬಳಸಿಕೊಂಡು ಮಕ್ಕಳ ಭವಿಷ್ಯ ರೂಪಿಸುವ ಕಾರ್ಯವನ್ನು ಮುಂದುವರಿಸಬೇಕು ಎಂದು ಹೇಳಿದರಲ್ಲದೆ, ವಿದ್ಯಾರ್ಥಿಗಳಿಗೆ ಶಿಕ್ಷಕರೇ ದಾರಿದೀಪ, ಅವರ ಕೆಡುಕು- ಒಳಿತಿಗೂ ಕಾರಣರಾಗುತ್ತಾರೆ ಎಂದು ಅಭಿಪ್ರಾಯಪಟ್ಟರು.

ತಮ್ಮ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುವಂತೆ ಆಶಯ ವ್ಯಕ್ತಪಡಿಸುವ ಮೂಲಕ ಶಿಕ್ಷಕ ವೃತ್ತಿಯ ಗೌರವವನ್ನು ಹೆಚ್ಚಿಸಿದ ಮಾಜಿ ರಾಷ್ಟ್ರಪತಿ ಹಾಗೂ ಶಿಕ್ಷಣ ತಜ್ಞ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ಗಣ್ಯರು ಸ್ಮರಿಸಿದರು. ಶಿಕ್ಷಕರ ದಿನಾಚರಣೆಯ ಅಂಗವಾಗಿ ಕ್ಷೇತ್ರದ ಎಲ್ಲ ಶಿಕ್ಷಕ-ಶಿಕ್ಷಕಿಯರಿಗೆ ಶುಭಾಶಯ ಕೋರಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಎಚ್.ಎಂ. ವಿಶ್ವನಾಥ್, ಕಾಂಗ್ರೆಸ್ ಮುಖಂಡ ಮುರುಳಿ ಮೋಹನ್, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಶಾರದಾ ಗುರುಮೂರ್ತಿ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಹಕಾರ ಸಂಘದ ವಾರ್ಷಿಕ ಮಹಾಸಭೆ



• ಪ್ರಜೋದಯ ವರದಿ

**ಅರೇಹಳ್ಳಿ:** ನಾರ್ವೆ ಗ್ರಾಮದ ಕೃಷಿಪತ್ತಿನ ಸಹಕಾರ ಸಂಘದಲ್ಲಿ 2025-26ನೇ ಸಾಲಿನ ವಾರ್ಷಿಕ ಮಹಾಸಭೆ ನಡೆಯಿತು.

ಎಚ್‌ಡಿಸಿಸಿ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಎಂ.ಎ. ನಾಗರಾಜ್ ಅವರು ಮಾತನಾಡಿ, ನಾರ್ವೆ ಕೃಷಿ ಪತ್ತಿನ ಸಹಕಾರ ಸಂಘವು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇಡೀ ಜಿಲ್ಲೆಯಲ್ಲಿ ಉತ್ತಮ ಹೆಸರನ್ನು ಗಳಿಸಿದೆ. ಸಂಘದ ಪ್ರಗತಿಗೆ ಅಧಿಕಾರಿಗಳು, ನಿರ್ದೇಶಕರು ಹಾಗೂ ಸಿಬ್ಬಂದಿಯ ಪರಿಶ್ರಮ ಮತ್ತು ಕಾಳಜಿಯೇ ಪ್ರಮುಖ ಕಾರಣವಾಗಿದೆ. ನಾರ್ವೆ ಸಂಘವು ಪ್ರಸಕ್ತ ಸಾಲಿನಲ್ಲಿ 1.36 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಹೇಳಿದರು.

ರೈತರಿಗೆ ಅಗತ್ಯವಾದ ಗೊಬ್ಬರ ಮಾರಾಟದಲ್ಲಿಯೂ ಉತ್ತಮ ಕಾರ್ಯ ನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ದೊರಕಿಸುವ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಘದ ಅಧ್ಯಕ್ಷ ದೇವರಾಜ್, ಉಪಾಧ್ಯಕ್ಷ ಮಧುಕುಮಾರ್, ಮಾಜಿ ಅಧ್ಯಕ್ಷ ಶಿವಪ್ರಸಾದ್, ನಿರ್ದೇಶಕರಾದ ಕೃಷ್ಣೇಗೌಡ, ಸೋಮಯ್ಯ, ಚೇತನ್, ಪ್ರವೀಣ್, ಚಿದಾನಂದ, ಚಂದ್ರು, ದೇವರಾಜ್, ಗೀತಾ ಲಕ್ಷ್ಮಣ್, ಗೋಪಮ್ಮ, ಕಾರ್ಯ ನಿರ್ವಹಣಾಧಿಕಾರಿ ಜ್ಯೋತಿ, ಸಿಬ್ಬಂದಿಗಳಾದ ಹೇಮರಾಜ್, ಸಂಘದ ಷೇರುದಾರರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

### ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ

## ನೋಟಿಸ್ ಪಡೆದ ಮತದಾರರು ದಾಖಲೆ ಸಲ್ಲಿಸಲು ಸೂಚನೆ

• ಪ್ರಜೋದಯ ವರದಿ

**ಸಕಲೇಶಪುರ:** ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಡಿ ನೋಟಿಸ್ ಪಡೆದ ಮತದಾರರು ನಿಗದಿತ ಅವಧಿಯೊಳಗೆ ಸೂಕ್ತ ದಾಖಲೆಗಳನ್ನು ಸಲ್ಲಿಸದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ಕಡಿತಗೊಳ್ಳುವ ಜೊತೆಗೆ ಸರ್ಕಾರದ ಸೌಲಭ್ಯಗಳಿಂದಲೂ ವಂಚಿತರಾಗುವ ಸಾಧ್ಯತೆ ಇದೆ ಎಂದು ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ ಎಚ್ಚರಿಸಿದರು.

ಪಟ್ಟಣದ ಪುರಭವನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣದ ಮೂರು ಮತಗಟ್ಟೆಗಳ ವ್ಯಾಪ್ತಿಯಲ್ಲಿ ಪ್ರಕ್ರಿಯೆಯಡಿ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲಾಗಿದ್ದು, ಅಗತ್ಯ ದಾಖಲೆಗಳನ್ನು ಸಲ್ಲಿಸದ 150 ಮಂದಿಗೆ ನೋಟಿಸ್ ನೀಡಿ ಉತ್ತರ ನೀಡುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ನೋಟಿಸ್ ಪಡೆದವರು ತಮ್ಮ



ಮತದಾರರ ಪಟ್ಟಿಯಲ್ಲಿನ ದಾಖಲಾತಿಗೆ ಸಂಬಂಧಿಸಿದಂತೆ ಭಾವಚಿತ್ರ, ಆಧಾರ್ ಕಾರ್ಡ್ ಸೇರಿದಂತೆ ಅಧಿಕಾರಿಗಳು ಸೂಚಿಸಿರುವ ಅಗತ್ಯ ದಾಖಲೆಗಳನ್ನು ನಿಗದಿತ ಅವಧಿಯಲ್ಲಿ ಸಲ್ಲಿಸಬೇಕು. ಸೂಕ್ತ ದಾಖಲೆಗಳನ್ನು ಸಲ್ಲಿಸಿದವರಿಗೆ ನಿಯಮಾನುಸಾರ ಮತದಾರರ ಪಟ್ಟಿಯಲ್ಲಿ ಹೆಸರು ಮುಂದುವರಿಸಲು ಅವಕಾಶ ಕಲ್ಪಿಸಲಾಗುವುದು ಎಂದು ಅವರು ತಿಳಿಸಿದರು.

ನಿಗದಿತ ಅವಧಿಯಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ನಿಯಮಾನುಸಾರ ಮತದಾರರ ಪಟ್ಟಿಯಿಂದ ಹೆಸರು ರದ್ದಾಗುವ ಸಾಧ್ಯತೆ ಇದೆ. ಆದ್ದರಿಂದ ನೋಟಿಸ್ ಪಡೆದ ಮತದಾರರು ಯಾವುದೇ ಗೊಂದಲಕ್ಕೆ ಒಳಗಾಗದೆ, ಸೂಚಿಸಿರುವ ದಾಖಲೆಗಳನ್ನು ನಿಗದಿತ ಅವಧಿಯಲ್ಲಿ ಸಲ್ಲಿಸುವಂತೆ ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿಗಳಾದ ಚಂದ್ರಹಾಸ, ಶಿಲ್ಪಾ, ವಿನಯ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಸುಸ್ಥಿರ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು

• ಪ್ರಜೋದಯ ವರದಿ

**ಆಲೂರು:** ದೇಶದ ಭವಿಷ್ಯ ರೂಪಿಸುವಂತಹ ಸುಸ್ಥಿರ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಮಹತ್ವ ಪಡೆದಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಪಟ್ಟಣದ ವಕ್ಕಲಿಗರ ಸಮುದಾಯ ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಶಿಕ್ಷಕರ ದಿನಾಚರಣೆ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ, ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡುವ ಸಂಸ್ಕಾರಯುತ ಶಿಕ್ಷಣದಲ್ಲಿ ದೇಶದ ಭವಿಷ್ಯ ಅಡಗಿರುತ್ತದೆ ಎಂದರು.

ಮಾಜಿ ಶಾಸಕ ಎಚ್. ಎಂ. ವಿಶ್ವನಾಥ್ ರವರು, ಗುಡ್ಡಗಾಡು ಪ್ರದೇಶದಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಸರ್ಕಾರ ವಿಶೇಷ ಭತ್ಯೆ



ಘೋಷಿಸಬೇಕು. ಕನಿಷ್ಠ ಗ್ರಾಮ ಪಂಚಾಯಿತಿಗಳಲ್ಲಿ ಶಿಕ್ಷಕರಿಗೆ ಮನೆಗಳನ್ನು ನಿರ್ಮಾಣ ಮಾಡಬೇಕು. ಪ್ರತಿಯೊಂದು ಶಾಲೆಗೆ ಒಂದು ಲ್ಯಾಪ್‌ಟಾಪ್ ಮತ್ತು ಸಂಬಂಧಿಸಿದ ಉಪಕರಣಗಳನ್ನು ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಕ್ಷೇತ್ರ ಗ್ಯಾರಂಟಿ ಸಮಿತಿ ಅಧ್ಯಕ್ಷ ಮುರಳಿಮೋಹನ್ ರವರು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶಿಕ್ಷಕರನ್ನು ಪ್ರೋತ್ಸಾಹಿಸಲು ವಿಶೇಷ ಜಾಗ್ರತೆ ವಹಿಸಲು ಸರ್ಕಾರದೊಡನೆ ಚರ್ಚಿಸಲಾಗುವುದು ಎಂದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಡಾ. ಗುರುಬಸವ ರಾಜು ಯಲ್ಲಚ್ಚಿನ್ ರವರು ಪ್ರಧಾನ ಭಾಷಣ ಮಾಡಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಎಚ್. ಕೆ. ಕುಮಾರಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಜೆ. ಕೃಷ್ಣೇಗೌಡ, ತಾ. ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಸುಬ್ರಹ್ಮಣ್ಯ, ಕ್ಷೇತ್ರ ಸಮನ್ವಯಾಧಿಕಾರಿ ಆರ್. ವಿಜಯ ಕುಮಾರ್, ಜಿಲ್ಲಾ ಕಸಾಪ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು, ಕೆ.ಎಸ್.ಮಂಜೇಗೌಡ, ಶಿವಮೂರ್ತಿ, ಗೋಪಾಲಕೃಷ್ಣ, ಶಾಂತಕೃಷ್ಣ, ಆದಿಲ್ ಪಾಷ, ಉವ ರವಿಪ್ರಕಾಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವರದರಾಜು, ಸರ್ಕಾರಿ, ಖಾಸಗಿ, ಅನುದಾನಿತ, ಅನುದಾನರಹಿತ ವಿವಿಧ ಶಿಕ್ಷಣ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ನಿವೃತ್ತ, ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದ, ತಾಲ್ಲೂಕು, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದ ಶಾಲೆಗಳು ಮತ್ತು ಶಿಕ್ಷಕರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮಕ್ಕೂ ಮೊದಲು ಪಟ್ಟಣದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಿತು.

## ಅಪಘಾತ: ಯುವಕ ಸಾವು

• ಪ್ರಜೋದಯ ವರದಿ

ಆಲೂರು: ರಸ್ತೆಗೆ ಅಡ್ಡಲಾಗಿ ಬಂದ ನಾಯಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮರಸು ಸಮೀಪ ನಡೆದಿದೆ.

ತಾಲ್ಲೂಕಿನ ಅಗಸರಹಟ್ಟಿ ಗ್ರಾಮದ ಸುರೇಶ್ (29) ಮೃತರು. ಸೆ. 2ರಂದು ಸ್ನೇಹಿತರನ್ನು ಮರಸು ಗ್ರಾಮಕ್ಕೆ ಬಿಟ್ಟು ವಾಪಾಸ್ ಬರುತ್ತಿದ್ದಾಗ ಇಳಿಜಾರು ರಸ್ತೆಯಲ್ಲಿ ಏಕಾಏಕಿ ನಾಯಿಯೊಂದು ಅಡ್ಡಬಂದಿದೆ. ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ್ದರಿಂದ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಶುಕ್ರವಾರ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಅರಸೀಕೆರೆಯಲ್ಲಿ ಪತ್ರಕರ್ತರಿಗೆ ರಕ್ಷಾಬಂಧನದ ದೀಕ್ಷೆ

## ಸೋದರತ್ವ ಎಂಬುದು ವಿಶೇಷವಾದ ಸಂಬಂಧ

• ಪ್ರಜೋದಯ ವರದಿ

**ಅರಸೀಕೆರೆ:** ಭೂಮಿ ಮೇಲೆ ಇರುವ ಜೀವಿಗಳಲ್ಲಿ ಅತ್ಯಂತ ಬುದ್ಧಿವಂತ ಜೀವಿ ಎಂದು ಕರೆಯಲ್ಪಡುವ ಮನುಷ್ಯ ಜೀವಿಯು ಹಲವು ಸಂಬಂಧಗಳಿಂದ ಕೂಡಿದೆ.ಅದರಲ್ಲಿ ಸೋದರತ್ವ ಎಂಬುದು ವಿಶೇಷವಾದ ಸಂಬಂಧ ಒಡಹುಟ್ಟಿದವರು ಮಾತ್ರ ಸೋದರ ಸೋದರಿಯಾಗಬೇಕೆಂದೇನಿಲ್ಲ, ಅದರ ಮಹತ್ವವನ್ನ ಅರಿತಿದ್ದವರೆಲ್ಲರಿಗೂ ತಿಳಿದಿದೆ ಎಂದು ರೋಟರಿ ಇಲ್ಲರ್ ವಿಲ್ ಸಂಸ್ಥೆಯ ಅಧ್ಯಕ್ಷೇ ಶ್ವೇತಾ ಮೋಹನ್ ಅವರು ಅಭಿಪ್ರಾಯಪಟ್ಟರು.

ರೋಟರಿ ಇನ್ನರ್‌ವಿಲ್ ಸಂಸ್ಥೆಯ ಸೋದರಿಯರು ಸುದ್ದಿಮನೆಯಲ್ಲಿ ಸೇವೆ ಮಾಡುವ ಕಾರ್ಯನಿರತ ಪತ್ರಕರ್ತರಿಗೆ ರಾಖಿ ಕಟ್ಟುವ ಮೂಲಕ ಸಮಾಜದ ಓರೆ -ಕೋರೆಗಳಿಗೆ ಕನ್ನಡಿ ಹಿಡಿಯುವ ಕೈಗಳು ಮತ್ತಷ್ಟು ಬಲಿಷ್ಠವಾಗಲಿ ಎಂಬ ಆಶಯದೊಂದಿಗೆ ರಕ್ಷಾಬಂಧನದ ದೀಕ್ಷೆ ನೀಡಿದರು. ಈ ಸಂದರ್ಭದಲ್ಲಿ



ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ನೆಲದಲ್ಲಿ ನಿಂತು ಸೋದರ ಸೋದರಿಯರೇ ಎನ್ನುವ ಮೂಲಕ ಜಗತ್ತಿಗೆ ಸೋದರತ್ವದ ಸಂಬಂಧವನ್ನು ಸಾರಿದರು ಅಂತಹ ಸೋದರ ಸಂಬಂಧ ಸಾರುವ ಪ್ರತಿಕವಾಗಿರುವ ರಕ್ಷಾಬಂಧನ ಕಾರ್ಯಕ್ರಮವನ್ನು ಪತ್ರಕರ್ತ ಸಹೋದರರೊಂದಿಗೆ ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಸಂತಸ ತಂದಿದೆ ಎಂದು ಅವರು ತಿಳಿಸಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ. ಆನಂದ್ ಅವರು ಮಾತನಾಡಿ, ಒಂದು ಹೆಣ್ಣು ಕಷ್ಟ -ನಷ್ಟ ಅಥವಾ ನೋವಿಗೆ ಸಿಲುಕಿದ ಸಂದರ್ಭದಲ್ಲಿ ಮೊದಲಿಗೆ ಅವಳ ನೆರವಿಗೆ ಬರುವುದು ಅಣ್ಣನೇ ಎಂಬುದು ಹಾಗಾದ ನಂಬಿಕೆ ಭಾರತೀಯ ಹೆಣ್ಣು ಮಕ್ಕಳಲ್ಲಿದೆ ಹಾಗಾಗಿ ಮಹಾಭಾರತದ ಒಂದು ಸನ್ನಿವೇಶದಲ್ಲಿ ದ್ರೌಪದಿಯ ವಸ್ತ್ರಾಪರಣ ಆಗುತ್ತಿದ್ದ ಸಂದರ್ಭದಲ್ಲಿ ಅಲ್ಲೇ ಅಪ್ರತಿಮ ಶುರುವಾದ ಐವರು ಪತಿಯರಿದ್ದರು ದ್ರೌಪದಿ ನಂಬಿಕೆ ಇಟ್ಟು ತನ್ನ ನೆರವಿಗೆ ಮೊದಲು ಕರೆದಿದ್ದೆ ತನ್ನ ಅಣ್ಣ ಶ್ರೀಕೃಷ್ಣನನ್ನು ಅಂತಹ ಮಹತ್ವ ಸೋದರತ್ವಕ್ಕಿದೆ ಎಂದರು.

ಕಷ್ಟ-ಸುಖಗಳಿಗೆ ಸೋದರರೇ ನೆರವಾಗುವರು. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದರು.

ಸೋದರತ್ವದ ಅಕ್ಕರೆಯೊಂದಿಗೆ ರಾಖಿ ಕಟ್ಟಿದ ಸೋದರಿಯರಿಗೆ ಹಿರಿಯ ಪತ್ರಕರ್ತರು ಶುಭ ಹಾರೈಸಿದರೆ ಕಿರಿಯ ಪತ್ರಕರ್ತರು ಸೋದರಿಯರ ಆಶೀರ್ವಾದ ಪಡೆದು ಪರಸ್ಪರ ಸಿಹಿ ತಿನಿಸುವ ಮೂಲಕ ರಕ್ಷಾಬಂಧನ ಕಾರ್ಯಕ್ರಮದ ಸಂತಸದ ಕ್ಷಣಕ್ಕೆ ಸಾಕ್ಷಿಯಾದರು.

ಈ ಸಂದರ್ಭದಲ್ಲಿ ತಾಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ಮಾಜಿ ಅಧ್ಯಕ್ಷ ರಾಮಚಂದ್ರ, ಕಾರ್ಯದರ್ಶಿ ಸ್ವಾಮಿ, ರೋಟರಿ ಇಲ್ಲರ್ ವಿಲ್ ಕಾರ್ಯದರ್ಶಿ ಆರತಿ ಸಂತೋಷ್, ಖಜಾಂಚಿ ರೇಖಾ, ಐಎಸ್‌ಓ ಗೀತಾ ಧರ್ಮ ನಾಯ್ಕ್, ನಿರ್ದೇಶಕರಾದ ಸವಿತಾ ಮತ್ತು ಇತರರು ಉಪಸ್ಥಿತರಿದ್ದರು

## ನೇಮಕಾತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಕಾರ್ಯ ನಿರ್ವಹಿಸುತ್ತಿರುವ ಪಾಲನಾ ಸಂಸ್ಥೆಗಳಾದ ಸರ್ಕಾರಿ ಬಾಲಕರ ಬಾಲ ಮಂದಿರ, ಸರ್ಕಾರಿ ಬಾಲಕಿಯರ ಬಾಲ ಮಂದಿರ ಹಾಸನ (ಮಹಿಳಾ ಸಿಬ್ಬಂದಿಗಳು ಮಾತ್ರ) ಸಂಸ್ಥೆಗಳಲ್ಲಿ ರುವ ನಿವಾಸಿಗಳ ಶೈಕ್ಷಣಿಕ ಹಾಗೂ ಆರೋಗ್ಯದ ಹಿತದೃಷ್ಟಿಯಿಂದ ಮಿಷನ್ ಮಾತ್ಸಲ್ಯದ ಮಾರ್ಗ ಸೂಚಿಯ ಅನ್ವಯ ಗೌರವಧನದ ಆಧಾರದಲ್ಲಿ ಕಾರ್ಯ ನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಗಳನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಸೆ.15 ಕೊನೆಯ ದಿನವಾಗಿರುತ್ತದೆ, ಸಂಜೆ 4 ಗಂಟೆಯ ಒಳಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಗೆ ಅರ್ಜಿದಾರರು ಸಂಬಂಧಿಸಿದ ದಾಖಲಾತಿಗಳೊಂದಿಗೆ ಖುದ್ದಾಗಿ ಬಂದು ಸಲ್ಲಿಸಬಹುದಾಗಿದೆ.

ಸದರಿ ಹುದ್ದೆಗಳು ಅರೆಕಾಲಿಕವಾಗಿದ್ದು (ಕನಿಷ್ಟ 2 ಗಂಟೆ ಅವಧಿಗೆ) ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ.

## ಸಂಸ್ಕಾರವೇ ಮಗುವಿನ ಭವಿಷ್ಯಕ್ಕೆ ಭದ್ರ ಬುನಾದಿ

• ಪ್ರಜೋದಯ ವರದಿ

**ಆಲೂರು:** ತಾಯಿಯ ಪ್ರೀತಿ, ತ್ಯಾಗ ಮತ್ತು ಸಂಸ್ಕಾರವೇ ಮಗುವಿನ ಭವಿಷ್ಯಕ್ಕೆ ಭದ್ರ ಬುನಾದಿ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಹಾಸನ ಜಿಲ್ಲಾ ಕಾರ್ಯದರ್ಶಿ ಹಾಗೂ ಪೈಡ್ ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಸುರೇಶ್ ಗುರೂಜಿ ಅವರು ಅಭಿಪ್ರಾಯಪಟ್ಟರು.

ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ಮಾತೃ ವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶ್ರೀ ಕೃಷ್ಣನ ಜೀವನವು ಸತ್ಯ, ಧರ್ಮ, ಕರ್ತವ್ಯ ಮತ್ತು ನಿಷ್ಠೆಯ ಮಾರ್ಗದಲ್ಲಿ ನಡೆಯುವ ಸಂದೇಶವನ್ನು ಸಾರುತ್ತದೆ. ಗೋಕುಲಾಷ್ಟಮಿ ದಿನ ಎಂದರೆ ಶ್ರೀ ಕೃಷ್ಣ ಹುಟ್ಟಿದ ದಿನ ಎಂದು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಸನಾತನ ಧರ್ಮದ ಪ್ರತಿಯೊಬ್ಬರೂ ತಮ್ಮ ಪುಟ್ಟ ಮಕ್ಕಳಿಗೆ ಶ್ರೀ ಕೃಷ್ಣನ ವೇಶ ಧರಿಸಿ, ಕೈಯಲ್ಲಿ ಕೊಳಲು ಹಿಡಿಯಲು ಕೊಟ್ಟು ಭಾವಚಿತ್ರ ತೆಗೆದು ಸಂತೋಷ ಪಡುತ್ತಾರೆ ಎಂದು ಹೇಳಿದರು.

### ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ




ಮುಖ್ಯೋಪಾಧ್ಯಾಯಿನಿ ಸಿ.ಎಸ್. ಪೂರ್ಣಿಮಾ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಾಲೆಯಲ್ಲಿ ಪ್ರತಿ ವರ್ಷ ಗೋಕುಲಾಷ್ಟಮಿ ಸಂಭ್ರಮ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪುಟ್ಟ ಮಕ್ಕಳಿಗೆ ಶ್ರೀ ಕೃಷ್ಣನ ವೇಷ ಧರಿಸಿ ಸ್ಪರ್ಧೆ ಏರ್ಪಡಿಸಿ ಬಹುಮಾನ ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ಪ್ರತಿಯೊಬ್ಬರಿಗೂ ತಾಯಿಯೆ ಮೊದಲ ಗುರು. ಜೀವನದುದ್ದಕ್ಕೂ ತಂದೆ, ತಾಯಿಗಳಿಗೆ ಸದಾ ಋಣಿಯಾಗಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ತಮ್ಮ ತಾಯಿ ಪಾದ ಪೂಜೆಯನ್ನು ಭಕ್ತಿ ಭಾವದಿಂದ ನೆರವೇರಿಸಿದರು. ಸಂಸ್ಥೆ ಮುಖ್ಯಸ್ಥ ಎಚ್.ವಿ.ನಾಗಭೂಷಣ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿ ನಾಯಕ ಮೋಹಿತ್ ಆರ್.ಕುಮಾರ್, ಪುಣ್ಯ, ಶಿಕ್ಷಕಿಯರಾದ ದೀಪ್ತಿ, ಶಕುಂತಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ ಕೃಷ್ಣ ವೇಷಧಾರಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

## ಮಾವಿನಕೆರೆ ಶ್ರೀ ಜವಹರ್ ನವೋದಯ ವಿದ್ಯಾಲಯದಲ್ಲಿ 'ಚಿಗುರು' ಕಾರ್ಯಕ್ರಮ



• ಪ್ರಜೋದಯ ವರದಿ

**ಹಾಸನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾವಿನಕೆರೆಯ ಪಿಎಂ ಶ್ರೀ ಜವಹರ್ ನವೋದಯ ವಿದ್ಯಾಲಯದಲ್ಲಿ 2026-27ನೇ ಸಾಲಿನ ಚಿಗುರು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಲ್.ಮಲ್ಲೇಶಗೌಡ ಅವರು ಅಧ್ಯಕ್ಷತೆ ವಹಿಸಿದ್ದರು, ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ ಡಾ.ಬಿ.ಕೆ.ರಮೇಶ್ ಅವರು ಉದ್ಘಾಟಿಸಿದರು. ಪ್ರಾಂಶುಪಾಲ ಜನಾರ್ಧನ್, ವರ್ಣಾಲಂಕಾರ ಕಲಾವಿದ ಮೇಕಪ್ ಹನುಮಂತು, ಭರತನಾಟ್ಯ ಕಲಾವಿದ ಉನ್ನತ್ ಜೈನ್, ಪಶು ವೈದ್ಯಾಧಿಕಾರಿ ಡಾ. ಕೆ.ಎನ್.ಕರುಣಾಕರ, ಉಪ ಪ್ರಾಂಶುಪಾಲ ಪ್ರವೀಣ್‌ಕುಮಾರ್ ಅವರು ಉಪಸ್ಥಿತರಿದ್ದರು.

ಜಿಲ್ಲೆಯ ಪ್ರತಿಭಾವಂತ ಬಾಲ ಕಲಾವಿದರಿಂದ ಸ್ಯಾಕ್ಸೋಪೋನ್, ಕೊಳಲು ವಾದನ, ಸುಗಮ ಸಂಗೀತ, ಜಾನಪದ ಗೀತೆ, ವೀರಗಾಸೆ, ಭರತನಾಟ್ಯ, ಏಕಪಾತ್ರಾಭಿನಯ, ನಾಟಕ ಹಾಗೂ ಶಾಸ್ತ್ರೀಯ ನೃತ್ಯ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿ ಬಂದವು.

### ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ರಾಧಾಕೃಷ್ಣನ್ ದಿನಾಚರಣೆ

## ವಿದ್ಯಾರ್ಥಿಗಳಲ್ಲಿ ವಿವೇಕ, ತಾಳ್ಮೆ ಮುಖ್ಯ

• ಪ್ರಜೋದಯ ವರದಿ

**ಹಾಸನ:** ನಗರದ ಎಸ್.ಆರ್.ಎಸ್ ಪ್ರಜ್ಞಾ ವಿದ್ಯಾ ಶಾಲೆಯಲ್ಲಿ ಶನಿವಾರ ಡಾ|| ಸರ್ವಪಲ್ಲಿ ರಾಧಾ ಕೃಷ್ಣನ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ಶಿಕ್ಷಕರ ದಿನಾ ಚರಣೆಯನ್ನು ಆಚರಿಸ ಲಾಯಿತು.

ಸಂಸ್ಥೆಯ ಅಧ್ಯಕ್ಷ ರಾಜಗೋಪಾಲ ಶೆಟ್ಟಿ ಅವರು ಡಾ|| ಸರ್ವಪಲ್ಲಿ ರಾಧಾ ಕೃಷ್ಣನ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸುವ ಮೂಲಕ ಗೌರವ ಸೂಚಿಸಿ, ಶಾಲೆಯ ಎಲ್ಲಾ ಶಿಕ್ಷಕ ವೃಂದದವರಿಗೆ ಶಿಕ್ಷಕರ ದಿನಾಚರಣೆಯ ಶುಭಾಶಯ ಕೋರಿದರು.

ನಂತರ ಮಾತನಾಡಿದ ಅವರು, ಭಾರತದ ಮೊದಲ ಉಪರಾಷ್ಟ್ರಪತಿಯಾಗಿಯೂ ಹಾಗೂ ಎರಡನೆಯ ರಾಷ್ಟ್ರಪತಿಯಾಗಿಯೂ ಕಾರ್ಯ ನಿರ್ವಹಿಸಿದ ಮಹಾನ್ ಶಿಕ್ಷಕ ಡಾ|| ಸರ್ವಪಲ್ಲಿ ರಾಧಕೃಷ್ಣನ್ ಅವರ ಗೌರವಾರ್ಥಕವಾಗಿ ಅವರ ಜನ್ಮ ದಿನವಾದ ಸೆಪ್ಟೆಂಬರ್ 5ನ್ನು ಶಿಕ್ಷಕರ ದಿನವನ್ನಾಗಿ ಆಚರಿಸುವ ಮೂಲಕ ಸಮಸ್ತ ಗುರುವೃಂದಕ್ಕೆ ನಮನ



ಸಲ್ಲಿಸುತ್ತೇವೆ ಎಂದು ಹೇಳಿದರು.

ಮಕ್ಕಳ ಭವಿಷ್ಯವನ್ನು ರೂಪಿಸಲು ಪಠ್ಯ ಬೋಧನೆ ಜೊತೆಗೆ ವಿದ್ಯಾರ್ಥಿಗಳಲ್ಲಿ ವಿವೇಕ, ತಾಳ್ಮೆ, ದೂರದೃಷ್ಟಿ, ಮಾನವೀಯತೆಯನ್ನು ಬೊಧಿಸಿ, ತನ್ಮೂಲಕ ವಿದ್ಯಾರ್ಥಿಗಳನ್ನು ದೇಶದ ಭವ್ಯ ಸತ್ಪ್ರಜೆಗಳನ್ನಾಗಿ ರೂಪಿಸುವ ಶಿಕ್ಷಕರಿಗೆ ವಂದನೆ ಸಲ್ಲಿಸುವ ನಿಟ್ಟಿನಲ್ಲಿ ಶಿಕ್ಷಕರ ದಿನಾ ಚರಣೆ ಅತ್ಯಂತ ಮಹತ್ವಪೂರ್ಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇಂದಿನ ವಿದ್ಯಾರ್ಥಿಗಳು ಬಹುಬೇಗನೆ ಮೊಬೈಲ್ ಚಟಕ್ಕೆ ಒಳಗಾಗುತ್ತಿದ್ದಾರೆ. ಈ ಹಿನ್ನೆಲೆ ಯಲ್ಲಿ ಶಿಕ್ಷ ಕರು ಹಾಗೂ ಪೋಷಕರು ಮಕ್ಕಳಿಗೆ ಪುಸ್ತಕಗಳನ್ನು ಓದುವಂತೆ ಪ್ರೇರೇಪಿಸಬೇಕು. ಹಾಗೆಯೇ ಪಠ್ಯವಲ್ಲದೆ ವಿವಿಧ ಕ್ರೀಡೆ ಗಳಲ್ಲಿ ತೊಡಗಿಸಿಕೊಳ್ಳುವಂತೆ ಉತ್ತೇ ಜನ ನೀಡಬೇಕು ಎಂದು ಹೇಳಿದರು.

ಶಿಕ್ಷಕರಿಗಾಗಿ ಏರ್ಪಡಿಸಲಾಗಿದ್ದ ವಿವಿಧ ಆಟೋಟಗಳು ಮತ್ತು ಮನರಂಜನಾ ಸ್ಪರ್ಧೆಗಳಲ್ಲಿ ಎಲ್ಲಾ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರಗು ನೀಡಿದರು. ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಶಿಕ್ಷಕರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಎಂ. ನಟರಾಜ್, ಸಂಸ್ಥೆಯ ಟ್ರಸ್ಟಿ ಆಶಾ ನಟರಾಜ್, ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಹಾಜರಿದ್ದರು.

## ದುರಸ್ತು ಅರ್ಜಿ ವಿಲೆಗೆ 3 ತಿಂಗಳ ಗಡುವು

**ಹಂದಿಗಳ ಕಾಟ: ನೀವೇ ರಕ್ಷಣೆ ಮಾಡಿಕೊಳ್ಳಿ:**

ಅರಣ್ಯ ಪ್ರದೇಶದಂಚಿನ ಜಮೀನಿನಲ್ಲಿ ಕಾಡುಹಂದಿಗಳ ದಾಳಿಯಿಂದ ಬೆಳೆ ನಾಶವಾಗುತ್ತಿದ್ದು, ಸೂಕ್ತ ಕ್ರಮ ಕೈಗೊಂಡು ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕೆಂದು ತಾಲ್ಲೂಕಿನ ಸೊಪ್ಪನಹಳ್ಳಿ ಗ್ರಾಮದ ರೈತ ರಾಮಚಂದ್ರ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಹಂದಿಗಳನ್ನು ಕಾಯಲು ಜನರನ್ನು ನೇಮಿಸಲು ಸಾಧ್ಯವಿಲ್ಲ. ಅರಣ್ಯದ ಪಕ್ಕದಲ್ಲಿ ಜಮೀನಿದ್ದರೆ ನೀವೇ ರಕ್ಷಣೆ ಮಾಡಿಕೊಳ್ಳಬೇಕು. ಸೋಲಾರ್ ಬೇಲಿ ಹಾಕಿಕೊಂಡು ಬೆಳೆ ಕಾಯಬೇಕು. ಪಟಾಕಿ ಸಿಡಿಸಿ ಹಂದಿಗಳನ್ನು ಓಡಿಸಬೇಕು. ಅದಕ್ಕೆಲ್ಲ ಪರಿಹಾರ ನೀಡಲು ಸಾಧ್ಯವಿಲ್ಲ. ಪರಿಹಾರ ನೀಡಲು ಅವಕಾಶವಿದ್ದರೆ ನೋಡೋಣ ಎಂದು ತಿಳಿಸಿದರು.

**ಅಧಿಕಾರಿಗಳಿಗೆ ನೋಟೀಸ್:**

ಸಭೆ ಮುಗಿಯುವ ಮುನ್ನವೇ ಕೆಲ ಅಧಿಕಾರಿಗಳು ಸಭೆಯಿಂದ ತೆರಳಿದ್ದಕ್ಕೆ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಅಧಿಕಾರಿಗಳ ವಿರುದ್ಧ ಗರಂ ಆದರು. ಸಭೆಯ ನಡುವೆಯೇ ಅಧಿಕಾರಿಗಳು ತೆರಳುತ್ತಿರುವುದನ್ನು ಗಮನಿಸಿದ ಸಚಿವರು, ಇವೆಲ್ಲವನ್ನೂ ಅಧಿಕಾರಿಗಳು ಬಿಟ್ಟುಬಿಡಿ. ಯಾರು ಯಾರು ಸಭೆ ಮುಗಿಯುವ ಮುಂಚೆ ಹೋಗಿದ್ದಾರೆ



ಅವರ ಹೆಸರುಗಳನ್ನು ಬರೆದುಕೊಳ್ಳಿ. ಅವರಿಗೆಲ್ಲ ನೋಟೀಸ್ ನೀಡಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಗೆ ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಈಗಲೇ ನೋಟೀಸ್ ನೀಡುತ್ತೇನೆ. ನನ್ನ ಅನುಮತಿ ಇಲ್ಲದೆ ಯಾವ ಅಧಿಕಾರಿಯೂ ಸಭೆಯಿಂದ ತೆರಳಬಾರದು ಎಂದು ತಾಕೀತು ಮಾಡಿದರು.

**700ಕ್ಕೂ ಅರ್ಜಿಗಳ ಸ್ವೀಕಾರ:**

ಸಭೆಯಲ್ಲಿ 12.30ರವರೆಗೂ 700ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಯಿತು. ಸಲ್ಲಿಕೆಯಾದ ಎಲ್ಲಾ ಅರ್ಜಿಗಳನ್ನು ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ಅಹವಾಲು ಸ್ವೀಕಾರವನ್ನು ಅರ್ಧಕ್ಕ ಸ್ಥಗಿತಗೊಳಿಸಿ, ಸಲ್ಲಿಕೆಯಾದ ಅರ್ಜಿಗಳಿಗೆ ಪರಿಹಾರ ಒದಗಿಸಲು ಪ್ರಯತ್ನಿಸಲಾಯಿತು. ಹಕ್ಕುಪತ್ರ, ದುರಸ್ತಿ, ಖಾತೆ, ಸ್ಮಶಾನ ಅಭಿವೃದ್ಧಿ, ರಸ್ತೆ , ಒತ್ತುವರಿ ತೆರವು, ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲಚೇತನರ ವೇತನ, ಗೃಹಲಕ್ಷ್ಮಿ, ನಿವೇಶನ , ಮನೆ, ಕೆರೆ ಅಭಿವೃದ್ಧಿ, ಕುಡಿಯುವ ನೀರು ಸಮಸ್ಯೆಗೆ ಸಂಬಂಧಪಟ್ಟಂತೆ ಸಲ್ಲಿಕೆಯಾದ ಅಹವಾಲುಗಳನ್ನು ಆಲಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿಮೆಂಟ್ ಮಂಜು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶುಭಂ ಶುಕ್ಲಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಮತ್ತಿತರರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019